ಸಂಪುಟ 01 | ಸಂಚಿಕೆ 181 | ಬುಧವಾರ 27 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1.ಜವಾಹರಲಾಲ್ ನೆಹರು ಅವರ ಪುಣ್ಯತಿಥಿ**

ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಪುಣ್ಯತಿಥಿಯನ್ನು ಮೇ 27 ರಂದು ಆಚ–'ರಿಸಲಾಗುತ್ತದೆ.
ಅವರು 1964ರ ಮೇ 27ರಂದು ನಿಧನರಾದರು.
ಆಧುನಿಕ ಭಾರತದ ನಿರ್ಮಾಣ, ಶಿಕ್ಷಣ, ವಿಜ್ಞಾನ ಹಾಗೂ ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ.

**2. ವಿಶ್ವ ಮಾರ್ಕೆಟಿಂಗ್ ದಿನ**

ವ್ಯಾಪಾರ ಮತ್ತು ಮಾರುಕಟ್ಟೆ ವ್ಯವಸ್ಥೆಯ ಮಹತ್ವವನ್ನು ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.
ವಿವಿಧ ಸಂಸ್ಥೆಗಳು ಹಾಗೂ ಕಾಲೇಜುಗಳಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯುತ್ತವೆ.

**3. ಅಂತರರಾಷ್ಟ್ರೀಯ ಸನ್‌ಸ್ಕ್ರೀನ್ ದಿನ**

ಸೂರ್ಯನ ಅಲ್ಟ್ರಾವಯೊಲೆಟ್ ಕಿರಣಗಳಿಂದ ಚರ್ಮವನ್ನು ರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.
ಬೇಸಿಗೆಯಲ್ಲಿ ಚರ್ಮದ ಆರೈಕೆಯ ಮಹತ್ವವನ್ನು ಈ ದಿನ ತಿಳಿಸಲಾಗುತ್ತದೆ.

**4. ರಾಷ್ಟ್ರೀಯ ದ್ರಾಕ್ಷಿ ಪಾಪ್ಸಿಕಲ್ ದಿನ**

ಇದು ಮುಖ್ಯವಾಗಿ ಅಮೆರಿಕಾದಲ್ಲಿ ಆಚರಿಸಲ್ಪಡುವ ಆಹಾರ ಸಂಬಂಧಿತ ವಿಶೇಷ ದಿನವಾಗಿದೆ.
ಸಾಮಾಜಿಕ ಜಾಲತಾಣಗಳಲ್ಲಿ ಜನರು ಈ ದಿನವನ್ನು ಹಂಚಿಕೊಳ್ಳುತ್ತಾರೆ

## ಸುಭಾಷಿತ

ಅಕ್ಷರ ಕಲಿತ ವ್ಯಕ್ತಿ ಭ್ರಷ್ಟನಾಗಬಹುದು,
ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದೆಂದಿಗೂ
ಭ್ರಷ್ಟನಾಗಲಾರ..

– ಶ್ರೀ ಸಿದ್ದೇಶ್ವರ ಸ್ವಾಮೀಜಿ

## ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಕ್ಲೈಮ್ಯಾಕ್ಸ್:

# ಗುರುವಾರ ಸಿದ್ದು ರಾಜೀನಾಮೆ ಪಕ್ಕಾ

**ನೈಜ್ಯ ದೆಸೆ ನ್ಯೂಸ್**



ಕರ್ನಾಟಕ ಕಾಂಗ್ರೆಸ್‌ನಲ್ಲಿ ದೊಡ್ಡ ನಾಯಕತ್ವ ಬದಲಾವಣೆಗೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಮಧ್ಯಾಹ್ನ 12 ಗಂಟೆಯೊಳಗೆ ರಾಜೀನಾಮೆ ನೀಡುವುದು ಪಕ್ಕಾ ಎಂದು ಅವರ ಆಪ್ತ ಮೂಲಗಳು ಖಚಿತಪಡಿಸಿವೆ. ಶುಕ್ರವಾರ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ.ಸಿದ್ದರಾಮಯ್ಯ ಅವರ ಆಪ್ತ ವಲಯದಿಂದ ಬಂದ ಮಾಹಿತಿ ಪ್ರಕಾರ, 'ಸಿದ್ದು ಅವರು ರಾಜೀನಾಮೆ ನೀಡಲು ಸಿದ್ಧರಾಗಿದ್ದಾರೆ. ಹೈಕಮಾಂಡ್‌ನ ನಿರ್ಧಾರಕ್ಕೆ ಅವರು ಒಪ್ಪಿಗೆ ಸೂಚಿಸಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಹೊಸ ಸರ್ಕಾರ ರಚನೆಯಾಗುವುದು ಖಚಿತ' ಎಂದು ಹೇಳಲಾಗಿದೆ.ಹೈಕಮಾಂಡ್ ನಿರ್ಧಾರದ ಹಿನ್ನೆಲೆ ದೆಹಲಿಯಲ್ಲಿ ನಡೆದ ಹೈಕಮಾಂಡ್ ಮೀಟಿಂಗ್ ಬಳಿಕ ಈ ನಿರ್ಧಾರಕ್ಕೆ ಅಂತಿಮ ರೂಪು ಬಂದಿದೆ. ರಾಜ್ಯಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರಿಗೆ ರಾಜ್ಯಸಭಾ ಸ್ಥಾನವನ್ನು ನೀಡುವ ಪ್ರಸ್ತಾಪವನ್ನು ಹೈಕಮಾಂಡ್ ಮುಂದಿಟ್ಟಿದೆ. ಸಿದ್ದರಾಮಯ್ಯ ಅವರು ತಮ್ಮ ಆಪ್ತರೊಂದಿಗೆ ನಡೆಸಿದ ಸಭೆಯಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.ರಾಜಕೀಯ ಪರಿಣಾಮ ಈ ಬದಲಾವಣೆಯು ಕರ್ನಾಟಕದ ರಾಜ–ಕೀಯ ಸಮೀಕರಣಗಳನ್ನು ಪೂರ್ಣವಾಗಿ ಬದಲಾಯಿಸುವ ಸಾಧ್ಯತೆ ಇದೆ. ಸಿದ್ದರಾಮಯ್ಯ ಅವರು ರಾಜ್ಯಸಭೆಗೆ ಹೋಗುವುದರಿಂದ ಪಕ್ಷದಲ್ಲಿ ಹೊಸ ಶಕ್ತಿ ಸಂಗ್ರಹವಾಗುವ ನಿರೀಕ್ಷೆಯಿದೆ. ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಸರ್ಕಾರ ರಚನೆಯಾದರೆ, ರಾಜ್ಯ ರಾಜ–ಕೀಯದಲ್ಲಿ ಹೊಸ ಅಧ್ಯಾಯ ಆರಂಭವಾಗುವ ಸಾಧ್ಯತೆ ಇದೆ.ಪ್ರಸ್ತುತ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ತನ್ನ ಅವಧಿಯನ್ನು ಮುಂದುವ–ರಿಸುವ ಸಾಧ್ಯತೆ ಹೆಚ್ಚಾಗಿದ್ದರೂ, ರಾಜ್ಯಸಭಾ ಚುನಾವಣೆಯ ಫಲಿತಾಂಶವು ಮುಂದಿನ ರಾಜಕೀಯ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಲಿದೆ.ಈ ಸುದ್ದಿ ಇನ್ನೂ ಅಧಿಕೃತ ದೃಢೀಕರಣಕ್ಕೆ ಕಾಯುತ್ತಿದ್ದರೂ, ಸಿದ್ದರಾಮಯ್ಯ ಅವರ ಆಪ್ತ ಮೂಲಗಳಿಂದ ಬಂದ ಈ ಮಾಹಿತಿ ರಾಜ್ಯ ರಾಜಕೀಯದಲ್ಲಿ ಭಾರೀ ಟ್ವಿಸ್ಟ್‌ಗೆ ಕಾರಣವಾಗಿದೆ. ಹೈಕಮಾಂಡ್‌ನ ಅಂತಿಮ ನಿರ್ಧಾರವನ್ನು ನೋಡಬೇಕಿದೆ.

## ಬೀದಿ ಬದಿ ವ್ಯಾಪಾರಿಗಳ ತೆರವು ಖಂಡಿಸಿ ಸಂತ್ರಸ್ತ ವ್ಯಾಪಾರಿಗಳಿಗೆ ಅವಕಾಶ ಹಾಗೂ ಕಾನೂನು ಬದ್ದ ರಕ್ಷಣೆ ನೀಡುವಂತೆ : ಕ ಕ ಬೀದಿ ಬದಿ ಮಾರಾಟಗಾರರ ಸಂಘ ಆಗ್ರಹ


**ನೈಜ್ಯ ದೆಸೆ ನ್ಯೂಸ್**



ಪಟ್ಟಣದ ಬೀದಿ ಬದಿಯ ವ್ಯಾಪಾ–ರಿಗಳ ಡಬ್ಬ ಅಂಗಡಿಗಳನ್ನು ಏಕ ಏಕಿ ತೆರವು ಮಾಡಿದ ಕಾರಣ ಬಡ ಜನರು ಬೀದಿಗೆ ಬಂದಿದ್ದಾರೆ. ನಿಜವಾದ ಬಡ ಕುಟುಂಬಗಳಿಗೆ ವ್ಯಾಪಾರ ಮಾಡಲು ಅವಕಾಶ ಕೊಡಬೇಕೆಂದು ಸಿಪಿಎಂಎಲ್(ರೇಡ್ ಸ್ಟಾರ) ರಾಜ್ಯ ಪ್ರಧಾನ ಕಾರ್ಯದರ್ಶಿ ಆರ. ಮಾನಸಯ್ಯ ಒತ್ತಾಯಿಸಿದರು .ಅವ–ರಿಂದು ಕಲ್ಯಾಣ ಕರ್ನಾಟಕ ಬೀದಿಬದಿ ಮಾರಾಟಗಾರರ ಸಂಘಟನೆ ವತಿಯಿಂದ ಪಟ್ಟಣದಲ್ಲಿ ಡಾ.ಬಿ.ಆರ್ ಅಂಬೇಡ್ಕರ ಸರ್ಕಲ್ ಬಳಿ ಬಹಿರಂಗ ಹೋರಾಟದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಲಿಷ್ಟ ರಾಜಕೀಯ ವ್ಯಕ್ತಿಗಳು, ಉದ್ಯೋಗಿಗಳು ಆಕ್ರಮವಾಗಿ ರಸ್ತೆ, ನಾಗರೀಕ ಸೌಲಭ್ಯ, ಉದ್ಯಾನವನ ಜಾಗ ಕಬಳಿಕೆ ಮಾಡಿಕೊಂಡು ಸ್ವಂತ ಕಟ್ಟಡ ಕಟ್ಟಿ ಕೊಂಡಿದ್ದಾರೆ. ಅಲ್ಲದೇ ಸರ್ಕಾರದ ಹೆಸ–ರಿನಲ್ಲಿರುವ ಜಾಗವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡು ತಮ್ಮದೇ ರೀತಿಯಲ್ಲಿ ವರ್ತನೆ ಮಾಡುತ್ತಾರೆ ಇಂತಹ ವ್ಯಕ್ತಿಗಳ ಆಕ್ರಮವಾಗಿ ವಶಪಡಿಸಿಕೊಂಡ ಜಾಗವನ್ನು ಕೂಡಲೇ ತೆರವು ಮಾಡಬೇಕು.ಪಟ್ಟಣದ ರಾಯಚೂರು ರಸ್ತೆಯ ಅಂಗಡಿ ಕಂಪಾರ್ಟ , ಬುದ್ದಿನ್ನಿ ಆಸ್ಪತ್ರೆ ರಸ್ತೆಯ ಐದನಾಳದವರ ಕಟ್ಟಡ, ಶಿವ ಲಾಡ್ಜ ಸೇರಿದಂತೆ ನಾಗರೀಕ ಸೌಲಭ್ಯ, ಉದ್ಯಾನವನ ಜಾಗ, ರಸ್ತೆ, ಶಾಲೆ ಕಟ್ಟಡ ಜಾಗವನ್ನು ನಗರದಲ್ಲಿ ಖಾಸಗಿ ವ್ಯಕ್ತಿಗಳು ಕಬಳಿಕೆ ಮಾಡಿಕೊಂಡಿದ್ದಾರೆ. ಅಲ್ಲದೇ ನ್ಯಾಯಾಲಯದ ಆದೇಶ ಇದ್ದರೂ ಅಂತಹ ಅಕ್ರಮ ಕಟ್ಟಡವನ್ನು ತೆರವು ಕಾರ್ಯ ಮಾಡದೇ ಬಡ ಜನರ ಬೀದಿಯಲ್ಲಿ ವ್ಯಾಪಾರ ಮಾಡುವ ಜನರ ಅಂಗಡಿಗಳು ತೆರವು ಮಾಡಿದ್ದು ಖಂಡನೀಯ. ಬೀದಿ ಬದಿಯ ಅಂಗಡಿಗಳ ತೆರವು ಹಿಂದೆ ಶಾಸಕ ಮಾನಪ್ಪ ವಜ್ಜಲ್, ಮಾಜಿ ಶಾಸಕ ಅಮರೇಗೌಡ ಪಾಟೀಲ್ ಬಯ್ಯಾಪುರ, ಎಂಎಲ್.ಸಿ ಶರಣಗೌಡ ಪಾಟೀಲ್ ಬಯ್ಯಾ ಪುರ , ಮಾಜಿ ಶಾಸಕ ಹೊಲಗೇರಿ ಸೇರಿದಂತೆ ಸ್ಥಳೀಯ ನಾಯಕರು ಸೇರಿ ಬಡ ಕುಟುಂಬಗಳಿಗೆ ಅನ್ಯಾಯ ಮಾಡುತ್ತಿ ದ್ದಾರೆ ಬಡವರ ಹೊಟ್ಟೆ ಮೇಲೆ ಬರೆ ಎಳೆಯುತ್ತಿದ್ದಾರೆಂದು ಎಂದು ಆಕ್ರೋಶ ವ್ಯಕ್ತಪಡಿಸಿದರು.ಬೀದಿ ಬದಿ ವ್ಯಾಪಾರಿಗಳನ್ನು ತೆರವು ಗೊಳಿಸಲು ಸಹಾಯಕ ಆಯುಕ್ತ–ರಿಗೆ ಯಾವುದೇ ಅಧಿಕಾರ ಇಲ್ಲದೇ ತೆರವು ಕಾರ್ಯ ಮಾಡಿ ಸಂಪೂರ್ಣವಾಗಿ ಕಾನೂನು ಉಲ್ಲಂಘನೆ ಮಾಡಿದ್ದಾರೆ. ಇದರ ಕುರಿತು ಸಂಪೂರ್ಣವಾಗಿ ನ್ಯಾಯ ಸಿಗುವವರೆಗೂ ನಾವು ಹೋರಾಟ ನಿಲ್ಲಿಸುವುದಿಲ್ಲ ಜೊತೆಗೆ ಮತ್ತೆ ಬೀದಿ ಬದಿಯ ವ್ಯಾಪಾರಕ್ಕೆ ಅವಕಾಶ ಕಲಿಸಬೇಕು ಇಲ್ಲವಾದಲಿ ಶಾಸಕ ಮಾನಪ್ಪ ವಜ್ಜಲ್ ಮನೆಗೆ ಮುತ್ತಿಗೆ ಹಾಕುತ್ತೇವೆ. ಬೀದಿ ಬದಿಯಲ್ಲಿ ವ್ಯಾಪಾರ ಮಾಡುವ ವ್ಯಾಪಾರಿಗಳ ಅಂಗಡಿಗಳ ಲೈಸೆನ್ಸ್ ಹೊಂದಿದ ಹಾಗೂ ಹಲವು ವರ್ಷಗಳಿಂದ ಜೀವನೋ ಪಾಯ ನಡೆಸುತ್ತಿದ್ದ ಬೀದಿಬದಿ ವ್ಯಾಪಾರಿಗಳನ್ನು ಸಹ ಮಾನವೀಯತೆ ಮತ್ತು ಕಾನೂನು ಪ್ರಕ್ರಿಯೆ ಪಾಲಿಸದೆ ಸ್ಥಳಾಂತರಿಸ ಲಾಗಿದೆ. ಇದರ ಪರಿಣಾಮವಾಗಿ ನೂರಾರು ಕುಟುಂಬಗಳು ತಮ್ಮ ಜೀವನೋಪಾಯ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿವೆ.ಕರ್ನಾಟಕ ಸರ್ಕಾರದ ಸಂಬಂಧಿತ ನಿಯಮಾವಳಿಗಳ ಅಡಿಯಲ್ಲಿ ಕಾನೂನುಬದ್ದ ರಕ್ಷಣೆ ಇದೆ. ಕಾನೂನುಗಳ ಪ್ರಕಾರ ಸಮೀಕ್ಷೆ ಗುರುತಿನ ಚೀಟಿ, ಪರ್ಯಾಯ ವ್ಯವಸ್ಥೆ, ಟೌನ್ ವೆಂಡಿಂಗ್ ಸಮಿತಿ ಶಿಫಾರಸು ಮತ್ತು ಸಮರ್ಪಕ ನೋಟಿಸ್ ಇಲ್ಲದೆ ವ್ಯಾಪಾರಿಗಳನ್ನು ತೆರವು ಗೊಳಿಸುವುದು ಕಾನೂನುಬಾಹಿರವಾಗಿದೆ. ಪುರಸಭೆ ಆಡಳಿತವು ಈ ನಿಯಮಗಳನ್ನು ಉಲ್ಲಂಘಿಸಿ ಏಕಪಕ್ಷೀಯ ಹಾಗೂ ಬಲಾತ್ಕಾರದ ಕ್ರಮ ಕೈಗೊಂಡಿರುವುದನ್ನು ತೀವ್ರವಾಗಿ ಖಂಡಿಸುತ್ತೇನೆ . ಕಾನೂನುಬಾಹಿರವಾಗಿ ತೆರವುಗೊಳಿಸಿದ ಎಲ್ಲಾ ಬೀದಿಬದಿ ಮಾರಾಟಗಾರರಿಗೆ ತಕ್ಷಣ ಪುನರ್ವ್ಯಾಪಾರ ಅವಕಾಶ ಕಲ್ಪಿಸಬೇಕು. ಲೈಸೆನ್ಸ್ ಹಾಗೂ ಗುರುತಿನ ಚೀಟಿ ಹೊಂದಿದ ವ್ಯಾಪಾರಿಗಳನ್ನು ಅವರ ಮೂಲ ಸ್ಥಳಗಳಲ್ಲಿ ಮರುಸ್ಥಾಪಿಸಬೇಕು. ಟೌನ್ ವೆಂಡಿಂಗ್ ಸಮಿತಿ ಸಭೆ ಕರೆಯಿಸಿ, ವ್ಯಾಪಾರಿಗಳ ಅಭಿಪ್ರಾಯ ಪಡೆದು ಮಾತ್ರ ಮುಂದಿನ ಕ್ರಮ ಕೈಗೊಳ್ಳ ಬೇಕು. ಪರ್ಯಾಯ ವ್ಯಾಪಾರ ವಲಯ, ಮೂಲಸೌಕರ್ಯ ಹಾಗೂ ಭದ್ರತೆ ಒದಗಿಸಬೇಕು. ಬಲಾತ್ಕಾರ ತೆರವು ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಅಧಿಕಾ–ರಿಗಳ ವಿರುದ್ಧ ಕ್ರಮವನ್ನು ಪರಿಶೀಲಿಸಬೇಕು. ಮುಂದಿನ ದಿನಗಳಲ್ಲಿ ನ್ಯಾಯಾಲಯ ಮತ್ತು ಕಾನೂನು ನಿಯಮ ಪಾಲಿಸದೆ ಯಾವುದೇ ತೆರವು ಕಾರ್ಯಾಚರಣೆ ನಡೆಸಬಾರದು ಎಂದರು.ನಂತರ ಮಾನವ ಹಕ್ಕುಗಳ ರಕ್ಷಣೆ ವೇದಿಕೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಹಿರೇಮಠ್ ಮಾತನಾಡಿ, ಚುನಾವಣೆ ಬಂದರೆ ಮನೆ ಮನೆಗೆ ಬರುತ್ತಾರೆ, ಬೀದಿಯಲ್ಲಿ ಸಣ್ಣ ಪುಟ್ಟ ವ್ಯಾಪಾರ ಮಾಡುವ ವ್ಯಾಪಾರಿಗಳಿಗೆ ಅನಧಿಕೃತವಾಗಿ ತೆರವು ಮಾಡಿ ಅನ್ಯಾಯ ಮಾಡಲಾಗಿದೆ ಇದನ್ನು ಖಂಡಿಸಿ ಹೋರಾಟ ಮಾಡುತ್ತೇವೆ ಕೂಡಲೇ ಬಡ ಕುಟುಂಬಗಳಿಗೆ ಮತ್ತೆ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು ಎಂದರು.ಕುಣೆಕೆಲ್ಲೂರು, ವಕೀಲ ಗಂಗಾಧರ ನಿರಲಕೇರಿ ಬಹಿರಂಗ ಹೋರಾಟದ ಕು–ರಿತು ಮಾತಾಡಿದರು.ಈ ಸಂದರ್ಭದಲ್ಲಿ ಸಂಚಾಲಕರಾದ ಲಿಂಗಪ್ಪ ಪರಂಗಿ, ಅಮರಯ್ಯ ಘಂಟಿ, ಹಸ್ಮಾತ್ , ಆದೇಶ ನಗನೂರು, ರಮೇಶ ನಾಯಕ, ಹುಸೇನಪ್ಪ , ಬಾಬಾಜಾನಿ , ಚಿದಾನಂದ ಕಸಬಾ ಲಿಂಗಸಗೂರು , ನಾಗರಾಜ್ , ಮಾದೇಶ ಸರ್ಜಾಪುರ , ವಿವಿಧ ಕನ್ನಡ ಪರ ಸಂಘಟನೆಯ ಅಧ್ಯಕ್ಷರು , ವ್ಯಾಪಾರಸ್ಥರು ಸೇರಿದಂತೆ ಇದ್ದರು.

## ಪಡಿತರ ಪಡೆಯಲು ಜನರು ದಿನವಿಡೀ ಕೆಲಸಬಿಟ್ಟು ಕ್ಯೂ, ಸರ್ವರ್ ಸಮಸ್ಯೆ

**ನೈಜ್ಯ ದೆಸೆ ನ್ಯೂಸ್**



ಹಾಲಾಪೂರ: ಗ್ರಾಮದಲ್ಲಿರುವ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಲು ಸಾರ್ವಜನಿಕರು ಗಂಟೆಗಟ್ಟಲೆ ಸರದಿಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಉಂಟಾಗುದ್ದು, ಈ ಸಮಸ್ಯೆ ರಾಜ್ಯದ್ಯಾಂತ ತಲೆದುರಿದೆ , ಕಾರಣ ಸರ್ವರ್ ಸಮಸ್ಯೆ, ಹಾಲಾಪೂರ ಹಾಗೂ ಬೇರೆ ಹಳ್ಳಿಗಳಿಂದ ಮಹಿಳೆಯರು, ವೃದ್ದರು, ಅಂಗವಿಕಲರು ಪಡಿತರ ಬಯೊಮೆಟ್ರಿಕ್ ಗಾಗಿ ಬರುತ್ತಿದ್ದು, ಸರ್ವರ್ ಸಮಸ್ಯೆಯಿಂದ ದಿನವಿಡಿ ಕಾಯುವಂತಹ ಪ್ರಸಂಗ ಬಂದಿದೆ, ಕಾರಣ ಕೇಂದ್ರ ಸರಕಾರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಮೇ, ಜುನ್ ತಿಂಗಳ ಅಕ್ಕಿಯನ್ನು ಒಂದೇ ಬಾರಿ ವಿತರಿಸಲು ಕ್ರಮಕೈಗೊಂಡಿದೆ.ಈ ಬಗ್ಗೆ ಸಿಇಒ ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ ರೆಷನ್ ಪಡೆಯಲು ಎರಡೆರೆಡು ಸಲ ಕಾರ್ಡದಾರರು ಬಯೊಮೆಟ್ರಿಕ್ ನೀಡಬೇಕು ಅದಕ್ಕೆ ತಡವಾಗುತ್ತಿದ್ದು,ಒಟ್ಟು ನಮ್ಮಲ್ಲಿ 1600 ಕಾರ್ಡಗಳಿದ್ದು, ಮೊದಲು ಒಂದು ವಾರದೊಳಗೆ ಬಯೊಮೆಟ್ರಿಕ್ ಆಗುತ್ತಿತ್ತು,ಆದರೆ ಈ ತಿಂಗಳ ಎರಡೆರಡು ಸಲ ಬೆರಳಚ್ಚು ಬಯೊಮೆಟ್ರಿಕ್ ನಿಂದ, ಇದುವರೆಗೆ 1100 ಕಾರ್ಡ ಮಾತ್ರ ಬೆರಳಚ್ಚು ಮುಗಿದಿದ್ದು, ಸರ್ವರ್ ಸಮಸ್ಯೆ ಮುಖ್ಯ, ನ್ಯಾಯಬೆಲೆ ಅಂಗಡಿ ಸಿಬ್ಬಂದಿ ಯವರು ರಾತ್ರಿ ಒಂಭತ್ತು ಗಂಟೆತನಕ ಟೋಕನ್ ಕೊಡುತ್ತಿದ್ದು, ಜಂಗಮರಹಳ್ಳಿ,ತುಗ್ಗಲದಿನ್ನಿ,ಜಿನ್ನಾಪೂರ ಗ್ರಾಮಸ್ಥರು ಮಾತಾಡಿ ಬಯೊಮೆಟ್ರಿಕ್ ಪಡೆಯಲು ನಮ್ಮ ಗ್ರಾಮಕ್ಕೆ ಬರಬೇಕು ಇದರಿಂದ ಅಂಗವಿಕಲರಿಗೆ,ವೃದ್ದರಿಗೆ ಅನುಕೂಲ ಅದಕ್ಕೆ ಮೇಲಾಧಿಕಾರಿಗಳು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಪ್ರತಿಭಾವಂತ ವಿದ್ಯಾರ್ಥಿಗಳ ಉತ್ತಮ ಶಿಕ್ಷಣಕ್ಕಾಗಿ ಪ್ರೋತ್ಸಾಹ ನೀಡುವುದು ಅವಶ್ಯ : ವಿಶ್ವನಾಥ್ ಹೂಗಾರ್

**ನೈಜ್ಯ ದೆಸೆ ನ್ಯೂಸ್**

ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಎಸ್.ಎಸ್.ಎಲ್.ಸಿ.ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ತಾಲ್ಲೂಕಿಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ , ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಉತ್ತಮ ಶಿಕ್ಷಣಕ್ಕಾಗಿ ಪ್ರೋತ್ಸಾಹ ನೀಡುವುದು ಅವಶ್ಯ ಇದೆ ಎಂದು ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ವಿಶ್ವನಾಥ್ ಹೂಗಾರ ಹೇಳಿದರು. ಅವರಿಂದು ಅಲ್ಲಮ ಪ್ರಭು ಸೌಹಾರ್ದ ಸಹಕರಿ ಸಂಘದ ಕಚೇರಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೇಂಬ್ರಿಡ್ಜ್ ಹೈಸ್ಕೂಲ್ ನ ಅಮೃತಾ ತಂದೆ ಮಲ್ಲೇಶ ಮಾಟೂರು 625 ಕ್ಕೆ 615, ಜ್ಞಾನ ಸಂಜೀವಿನಿ ಹೈಸ್ಕೂಲ್ ನ ಸಂಜಯ್ ತಂದೆ ಶಂಕರಲಿಂಗಪ್ಪ 98.88,% ಸಮರ್ಥ್ ಮುತಾಲಿಕ್, 98% ಹಾಗೂ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ 625 ಅಂಕಗಳಿಗೆ 587 ಅಂಕ ಗಳಿಸುವ ಮೂಲಕ ಸೀತಾಲಕ್ಷ್ಮಿ ಮುತಾಲಿಕ್ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ. ಈ ಎಲ್ಲಾ ಪ್ರತಿಭಾವಂತ ವಿಸ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿ ಅಲ್ಲಮಪ್ರಭು ಸೌಹಾರ್ದ ಸಹಕಾರಿ ಸಂಘದ ಕಚೇರಿಯಲ್ಲಿ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಸಹಕಾರಿ ಸಂಘದ ಉಪಾದ್ಯಕ್ಷರಾದ ಅಮರೇಶ ಕುಂಬಾರ, ನಿರ್ದೇಶಕರಾದ ಬಸವರಾಜ ಹೂಗಾರ, ಅಮರೇಶ ಕಳಸದ ಗುಡಿ, ಈರಮ್ಮ ಮಲ್ಲೇಶ ಮಾಟೂರ, ಸಿಎ ಬಸವರಾಜ ಸಜ್ಜನ್, ಹಾಗೂ ಪೋಷಕರು ಮತ್ತು ಸಹಕಾರಿ ಸಂಘದ ಸಿಬ್ಬಂದಿಗಳು ಉಪಸ್ಥಿತರಿದ್ದರು.



## ಸಾಹಿತ್ಯ ಸಿಂಚನ

ಕಲೆ
ಬಣ್ಣಗಳ ಮಾತು ಕೇಳಿದಾಗ
ಮನಸೇ ಚಿತ್ರವಾಗುತ್ತದೆ,
ಭಾವನೆಗಳ ತುಂತುರು ಬೀಳುವಾಗ
ಕಲೆ ಜೀವಂತವಾಗುತ್ತದೆ.

ಕಾಗದದ ಮೇಲೆ ರೇಖೆ ಬರೆದರೆ
ಕೇವಲ ಗೆರೆ ಅಲ್ಲ ಅದು,
ಹೃದಯದೊಳಗಿನ ಕನಸುಗಳು
ರೂಪ ಪಡೆದ ಕಥೆ ಅದು.

ನೃತ್ಯದ ಹೆಜ್ಜೆಯಲ್ಲಿ ನಾದವಿದೆ,
ಸಂಗೀತದಲ್ಲಿ ಆತ್ಮದ ಸ್ಪರ್ಶ,
ಕಲೆಯಿಲ್ಲದ ಜೀವನವೆಂದರೆ
ಬಣ್ಣವಿಲ್ಲದ ನಿಶ್ಯಬ್ದ ದರ್ಶನ.

ಕಲೆ ಎಂದರೆ ಆತ್ಮದ ಭಾಷೆ,
ಮಾತಿಲ್ಲದೆ ಹೇಳುವ ಕಥೆ,
ಮಾನವನ ಹೃದಯದೊಳಗಿರುವ
ಅಮರ ಸೌಂದರ್ಯದ ಪಥವೇ ಕಲೆ.

– ರಮೇಶ್

# ಪೆಟ್ರೋಲ್ ಹಾಗೂ ಡೀಸೆಲ್ ಕೊರತೆ – ಸಂಕಷ್ಟದಲ್ಲಿ ರೈತರು, ಸಾರ್ವಜನಿಕರು; ಕೇಂದ್ರ ಸರ್ಕಾರ ವಿರುದ್ಧ ಆಕ್ರೋಶ–ಶಿವಕುಮಾರ್ ಪಾಟೀಲ್ ಗಾಣದಾಳ ಹೇಳಿಕೆ

ನೈಜ್ಯ ದೆಸೆ ನ್ಯೂಸ್




ರಾಯಚೂರು : ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಸಮಿತಿ ಸದಸ್ಯರಾದ ಶಿವಕುಮಾರ್ ಪಾಟೀಲ್ ಗಾಣದಾಳ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರದ ನಿರಂತರ ಬೆಲೆ ಏರಿಕೆ ಹಾಗೂ ಪೆಟ್ರೋಲ್, ಡೀಸೆಲ್ ಮತ್ತು ಐಕಲು ಗ್ಯಾಸ್ ಕೊರತೆಯಿಂದ ಸಾರ್ವಜನಿಕರು ಹಾಗೂ ರೈತರಲ್ಲಿ ಆತಂಕ ಹೆಚ್ಚಾಗಿದೆ ಎಂದು ಆರೋಪಿಸಿದರು.ಕೇಂದ್ರ ಸರ್ಕಾರವು ಸಾರ್ವಜನಿಕರಿಗೆ ಆಗುತ್ತಿರುವ ಬೆಲೆ ಏರಿಕೆ ಹಾಗೂ ಪೆಟ್ರೋಲ್, ಡೀಸೆಲ್, ಐಕಲು ಗ್ಯಾಸ್ ಕೊರತೆಯನ್ನು ನಿಭಾಯಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಅವರು ತೀವ್ರವಾಗಿ ಖಂಡಿಸಿದರು.ಗೃಹ ಬಳಕೆಯ ಐಕಲು ಸಿಲಿಂಡರ್ ಬೆಲೆ ಮತ್ತೆ ಏರಿಕೆಯಾಗಿರುವುದು ಮತ್ತು ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಸಾಮಾನ್ಯ ಜನರು, ವಿಶೇಷವಾಗಿ ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಹೇಳಿದರು. ಬೆಲೆ ಏರಿಕೆಯ ಪರಿಣಾಮ ಮಹಿಳೆಯರ ದಿನನಿತ್ಯದ ಜೀವನ ಹಾಗೂ ಕುಟುಂಬದ ಆರ್ಥಿಕ ಸ್ಥಿತಿಯ ಮೇಲೂ ನೇರ ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.ಜನರ ಜೀವನ ಸುಧಾ–ರಿಸಲು ಆಯ್ಕೆಯಾದ ಸರ್ಕಾರವೇ ಜನರ ಮೇಲೆಯೇ ಹೆಚ್ಚುವರಿ ಭಾರ ಹಾಕುತ್ತಿರುವುದು ವಿಷಾದನೀಯ," ಎಂದು ಅವರು ಹೇಳಿದರು. ಕೇಂದ್ರ ಸರ್ಕಾರಕ್ಕೆ ಪ್ರಮುಖ ಆಗ್ರಹಗಳು:ಐಕಲು ಗ್ಯಾಸಿನ ಬೆಲೆಯನ್ನು ತಕ್ಷಣ ಕಡಿತಗೊಳಿಸಬೇಕು ಪ್ರತಿ ಕುಟುಂಬಕ್ಕೆ ವರ್ಷಕ್ಕೆ 12 ಸಿಲಿಂಡರ್ ನೀಡುವ ವ್ಯವಸ್ಥೆ ಮಾಡಬೇಕು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಸಬ್ಸಿಡಿ ಮರುಸ್ಥಾಪಿಸಬೇಕು ಮಹಿಳಾ ಪ್ರಧಾನ ಕುಟುಂಬಗಳಿಗೆ ವಿಶೇಷ ಆರ್ಥಿಕ ಸಹಾಯ ಘೋಷಿಸಬೇಕು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕೂಡಲೇ ಇಳಿಸಬೇಕು ಇಂಧನ ಕೊರತೆಯನ್ನು ತಕ್ಷಣ ಸರಿಪಡಿಸಬೇಕು ಜನರ ಸಂಕಷ್ಟ ನಿವಾರಣೆಗೆ ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.



## ಶಾಸಕ ರಾಜುಗೌಡಗೆ ಮುಖಂಡ ಪ್ರಭುಗೌಡರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಇವರನ್ನು ಶಳ್ಳಗಿ ಗ್ರಾಮದ ಜೆಡಿ–ಎಸ್ ಮುಖಂಡರಾದ ಪ್ರಭುಗೌಡ ನಾಡಗೌಡ ಅವರು ಸನ್ಮಾನಿಸಿ ಗೌರವಿಸಿದರು. ಮಂಗಳವಾರ ಗ್ರಾಮದಲ್ಲಿ ಭೂಮಿಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಾಸಕರು ಆಗಮಿಸಿದ ಸಂದರ್ಭದಲ್ಲಿ ಅವರನ್ನು ತಮ್ಮ ಮನೆಗೆ ಆಮಂತ್ರಿಸಿ ಈ ಸನ್ಮಾನವನ್ನು ನೀಡಿದರು.ಈ ಸಂದರ್ಭದಲ್ಲಿ ಗಣ್ಯರಾದ ಕಾಶಿರಾಯ ದೇಸಾಯಿ, ಸುರೇಶಗೌಡ ನಾಡಗೌಡ,ಶಂಕರಗೌಡ ದೇಸಾಯಿ, ವಿಶ್ವನಾಥರೆಡ್ಡಿ ನಾಡಗೌಡ, ಎಂ.ಎಂ. ಪೊಲೀಸ್ ಪಾಟೀಲ, ರಾಜುಗೌಡ ಕೋಳೂರ, ಮಾಡುಸೌಕಾರ ಬಿರಾದಾರ, ಪಂಚಾಕ್ಷರಿ ಹಿರೇಮಠ, ಸಿದ್ದನಗೌಡ ಬಿರಾದಾರ(ಲಕ್ಕುಂಡಿ) ಮತ್ತಿತರರು ಇದ್ದರು.

# ರಾಯಚೂರು ತಾಲ್ಲೂಕಿನ ಕೊರಟಕುಂದಾ ಸಮೀಪ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಸೇತುವೆ–ಕಂ–ಬ್ಯಾರೇಜ್ ಯೋಜನೆ ಕುರಿತು ಇಂದು ತೆಲಂಗಾಣ ಕಾರ್ಯಾಲಯದಲ್ಲಿ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳ ನಡುವೆ ಮಹತ್ವದ ಉನ್ನತ ಮಟ್ಟದ ಅಂತರರಾಜ್ಯ ಸಭೆ ಯಶಸ್ವಿ...


ನೈಜ್ಯ ದೆಸೆ ನ್ಯೂಸ್




ರಾಯಚೂರು ತಾಲ್ಲೂಕಿನ ಕೊರಟಕುಂದಾ ಸಮೀಪ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಸೇತುವೆ–ಕಂ–ಬ್ಯಾರೇಜ್ ಯೋಜನೆ ಕುರಿತು ಇಂದು ತೆಲಂಗಾಣ ಕಾರ್ಯಾಲಯದಲ್ಲಿ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳ ನಡುವೆ ಮಹತ್ವದ ಉನ್ನತ ಮಟ್ಟದ ಅಂತರರಾಜ್ಯ ಸಭೆ ನಡೆಯಿತು. ಈ ಸಭೆಗೆ ಉತ್ತಮ್ ಕುಮಾರ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು.ಸಭೆಯಲ್ಲಿ ತೆಲಂಗಾಣ ಸರ್ಕಾರದ ಪರವಾಗಿ ವಾಕಿಟಿ ಶ್ರೀಹರಿ , ಜುಪಳ್ಳಿ ಕೃಷ್ಣ ರಾವ್ ಹಾಗೂ ನಾಗರ್‌ಕುರ್ನೂಲ್ ಲೋಕಸಭಾ ಕ್ಷೇತ್ರದ ಸಂಸದ ಮಲ್ಲು ರವಿ ಉಪಸ್ಥಿತರಿದ್ದರು.ಕರ್ನಾಟಕದ ಪರವಾಗಿ ಎನ್ ಎಸ್ ಬೋಸರಾಜು ನೇತೃತ್ವದಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ ಕುಮಾರ್ ನಾಯಕ ಮತ್ತು ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಭಾಗವಹಿಸಿದರು. ಎರಡೂ ರಾಜ್ಯಗಳ ನೀರಾವರಿ, ತಾಂತ್ರಿಕ ಹಾಗೂ ಆಡಳಿತಾತ್ಮಕ ಇಲಾಖೆಗಳ ಹಿರಿಯ ಅಧಿಕಾರಿಗಳು ಸಹ ಸಭೆಯಲ್ಲಿ ಉಪಸ್ಥಿತರಿದ್ದು, ಯೋಜನೆಯ ವಿವಿಧ ಆಯಾಮಗಳ ಕುರಿತು ಸಮಗ್ರ ಚರ್ಚೆ ನಡೆಸಿದರು.ಈ ಸೇತುವೆ–ಕಂ–ಬ್ಯಾರೇಜ್ ಯೋಜನೆ ಉತ್ತರ ಕರ್ನಾಟಕದ ವಿಶೇಷವಾಗಿ ರಾಯಚೂರು ಭಾಗದ ರೈತರಿಗೆ ಮಹತ್ತರ ಪ್ರಯೋಜನ ತರುವ ನಿರೀಕ್ಷೆಯಿದೆ. ಯೋಜನೆಯ ಮೂಲಕ ಕೃಷ್ಣಾ ನದಿಯ ನೀರನ್ನು ಸಮರ್ಪಕವಾಗಿ ಸಂಗ್ರಹಿಸಿ ನೀರಾವರಿ ವಿಸ್ತರಣೆ, ಕುಡಿಯುವ ನೀರಿನ ಪೂರೈಕೆ, ಅಂತರ್ಜಲ ಮಟ್ಟ ಹೆಚ್ಚಳ ಹಾಗೂ ಬರಪೀಡಿತ ಪ್ರದೇಶಗಳಲ್ಲಿ ಕೃಷಿಗೆ ನೆರವು ನೀಡುವ ಉದ್ದೇಶ ಹೊಂದಲಾಗಿದೆ. ಜೊತೆಗೆ ಗ್ರಾಮೀಣ ಸಂಪರ್ಕ ವ್ಯವಸ್ಥೆ ಸುಧಾರಣೆ ಮತ್ತು ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ದೊರೆಯುವ ಸಾಧ್ಯತೆ ಇದೆ.ಸಭೆಯಲ್ಲಿ ಯೋಜನೆಯ ತಾಂತ್ರಿಕ ಅಂಶಗಳು, ನೀರಿನ ಹಂಚಿಕೆ, ಪರಿಸರ ಸಂಬಂಧಿತ ವಿಷಯಗಳು ಹಾಗೂ ಎರಡೂ ರಾಜ್ಯಗಳ ಹಿತಾಸಕ್ತಿಗಳ ಕುರಿತು ಸವಿಸ್ತಾರ ಚರ್ಚೆ ನಡೆಯಿತು. ಕೆಲವು ಆತಂಕಗಳು ಮತ್ತು ಸ್ಪಷ್ಟೀಕರಣ ಅಗತ್ಯವಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಪರಸ್ಪರ ಸಹಕಾರ ಮತ್ತು ಸಮನ್ವಯದ ಮೂಲಕ ಮುಂದಿನ ಹಂತದ ಚರ್ಚೆಗಳನ್ನು ಮುಂದುವರಿಸಲು ನಿರ್ಧಾರ ಕೈಗೊಳ್ಳಲಾಯಿತು.ಕರ್ನಾಟಕದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಈ ಮುಂದಾಳತ್ವವು ರಾಜ್ಯದ ನೀರಾವರಿ ಅಭಿವೃದ್ಧಿ, ರೈತರ ಹಿತಾಸಕ್ತಿ, ಕುಡಿಯುವ ನೀರಿನ ಭದ್ರತೆ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆಯತ್ತ ಸರ್ಕಾರದ ಬದ್ಧತೆಯನ್ನು ಮತ್ತೊಮ್ಮೆ ಪ್ರತಿಬಿಂಬಿಸುತ್ತದೆ.

# ತ್ಯಾಗ ಬಲಿದಾನ ಪರಸ್ಪರ ಪ್ರೀತಿಯ ಸಮ್ಮಿಲನವೇ ಬಕ್ರೀದ್

ನೈಜ್ಯ ದೆಸೆ ನ್ಯೂಸ್



ಮುಸ್ಲಿಂ ಬಾಂಧವರು ಪ್ರವಾದಿ ಇಬ್ರಾಹಿಂ ಅವರ ತ್ಯಾಗ–ಬಲಿದಾನಗಳ ನೆನಪಿನಲ್ಲಿ ಆಚರಿಸುವ ಹಬ್ಬವೇ 'ಈದುಲ್ ಅದ್‌ಹಾ'. ಭಾರತದಲ್ಲಿ ಈ ಹಬ್ಬವನ್ನು ಮುಸ್ಲಿಂ ಬಾಂಧವರ ಪವಿತ್ರ ಬಕ್ರೀದ್ ಎಂದು ಆಚರಿಸುತ್ತಾರೆ. ಈ ಬಾರಿ ಮೇ 28 ರಂದು ದೇಶದಾದ್ಯಂತ ಮುಸ್ಲಿಮರು ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾರೆ.ವಾಸ್ತವದಲ್ಲಿ ಅಲ್ಲಾಹನು ಮಾನವ ಬಲಿಯನ್ನು ಒಪ್ಪುವುದೇ ಇಲ್ಲ ಎಂಬ ಪರಮ ಸತ್ಯವನ್ನು ಈ ಮೂಲಕ ಮಾನವಕುಲಕ್ಕೆ ಸಾರಲಾಗುತ್ತದೆ. ಹಾಜಿರಾ ಬೀವಿಯ ಸಹನೆ ಮತ್ತು ತ್ಯಾಗ, ಇಬ್ರಾಹೀಮರ ವಚನ ಬದ್ಧವಚನ ಬದ್ಧತೆ, ಬಾಲಕ ಇಸ್ಮಾಯೀಲರ ದೇವನಿಷ್ಠೆ ಮತ್ತು ಧೈರ್ಯದ ಸ್ಮರಣೆಯಾಗಿದೆ ಈದುಲ್ ಅಝ್ಹಾ.ಬಕ್ರೀದ್ ಹಬ್ಬವು ತ್ಯಾಗ, ಬಲಿದಾನ ಮತ್ತು ಆಹಾರ ದಾನದ ಸಮ್ಮಿಲನವಾಗಿದೆ. 5000 ವರ್ಷಗಳ ಹಿಂದೆ ಪ್ರವಾದಿ ಇಬ್ರಾಹಿಂ ಅವರ ತ್ಯಾಗ ಮತ್ತು ಬಲಿದಾನದ ನೆನಪಿಗಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಮೆಕ್ಕಾದಲ್ಲಿ ಈ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಜಗತ್ತಿನಾದ್ಯಂತ ಮುಸ್ಲಿಮರು ಆಚರಿಸುವ ಅತಿ ಬಹುಮುಖ್ಯ ಎರಡು ಹಬ್ಬಗಳೆಂದರೆ ಬಕ್ರೀದ್ ಮತ್ತು ರಂಜಾನ್ ಅತ್ಯಂತ ಪವಿತ್ರ ಹಬ್ಬ ಎಂದು ಪರಿಗಣಿಸಲಾಗುತ್ತದೆ. ಬಕ್ರೀದ್ ಹಬ್ಬಕ್ಕೆ ಸುಮಾರು 5000 ವರ್ಷದ ಇತಿಹಾಸವಿದೆ. ಬಕ್ರೀದ್ ಹಬ್ಬದ ವಿಶೇಷವೆಂದರೆ ತ್ಯಾಗ, ಬಲಿದಾನ, ಆಹಾರ ದಾನದ ಸಮ್ಮಿಲನ ಮತ್ತು ಅಸ್ಮರಣೀಯ ಘಟನೆ ನೆನಪಿಸುವ ಹಬ್ಬವಾಗಿದೆ.5000 ವರ್ಷಗಳ ಹಿಂದೆ ಪ್ರವಾದಿ ಮಮ್ಮದರಲ್ಲಿ ಓರ್ವರಾದ ಪ್ರವಾದಿ ಇಬ್ರಾಹಿಂ ಅವರ ತ್ಯಾಗ ಮತ್ತು ಬಲಿದಾನ ನೆನಪಿಸುವಂತಹ ಒಂದು ಪವಿತ್ರವಾದ ಸಾಕ್ಷಿಯೇ ಬಕ್ರೀದ್. ಇಸ್ಲಾಮಿನ ಪ್ರಕಾರ ಏಕದೇವೋಭವ ವೃತವನ್ನು ಕಡ್ಡಾಯವಾಗಿ ಆಚರಣೆ ಮಾಡಿ ಪ್ರವಾದಿ ಇಬ್ರಾಹಿಂ ಅವರು ತಮ್ಮ ಶತ್ರುವಿನ ಅಗ್ನಿಕುಂಡದಲ್ಲಿ 7 ದಿನ ಕಳೆದರು. ಇಬ್ರಾಹಿಂ ಅವರು ಮಕ್ಕಳಿಲ್ಲದ ಕೊರಗನ್ನು ಅನುಭವಿಸುತ್ತಾ ಸಾಕಷ್ಟು ನೋವು ನಲಿವುಗಳು ಬಂದವು. ಸುಮಾರು ನೂರು ವರ್ಷದ ಆಸುಪಾಸಿನಲ್ಲಿ ಇರುವಾಗ ಅಲ್ಲಾನು ಪ್ರತ್ಯಕ್ಷನಾಗಿ ಒಂದು ಗಂಡು ಮಗುವನ್ನು ಕರುಣಿಸುತ್ತಾನೆ. ಆ ಮಗನಿಗೆ ಇಸ್ಮಾಯಿಲ್ ಎಂದು ನಾಮಕರಣ ಮಾಡಿದರು. ಮುಸ್ಲಿಮರ ಪವಿತ್ರ ಧಾರ್ಮಿಕ ಕ್ಷೇತ್ರ ಹಜ್‌ಗೆ ಹೋದಾಗ ಧಾರ್ಮಿಕ ಕ್ಷೇತ್ರದಲ್ಲಿ ಅಲ್ಲಾನು 'ನಿನ್ನ ಮಗುವನ್ನು ಇಲ್ಲಿಯೇ ಬಿಡಬೇಕು' ಎಂದು ಆಜ್ಞೆ ಮಾಡಿದಾಗ ಪ್ರವಾದಿ ಇಬ್ರಾಹಿಂ, ಅಲ್ಲಾನು ಕರುಣಿಸಿದ ಮಗು 'ನಿನಗೆ ಇರಲಿ' ಎಂದು ಒಪ್ಪಿಕೊಳ್ಳುತ್ತಾರೆ.ಇಷ್ಟಾಗಿಯೂ ಅಲ್ಲಾನು ಇಬ್ರಾಹಿಂ ಅವರ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಮತ್ತೊಂದು ಆಜ್ಞೆ ಮಾಡುತ್ತಾನೆ. ಏನೆಂದರೆ 'ನಿನ್ನ ಮಗ ಇಸ್ಮಾಯಿಲ್ಲನನ್ನು ಬಲಿ ಕೊಡಬೇಕು' ಎಂದು ಇಬ್ರಾಹಿಂ ಅವರಿಗೆ ಹೇಳಿದಾಗ ಇಬ್ರಾಹಿಂ ಅವರು, 'ಆಯಿತು' ಎಂದು ಒಪ್ಪಿಕೊಳ್ಳುತ್ತಾರೆ. ನಂತರ ತಂದೆಯಿಂದಲೇ ಮಗನ ಶಿರಚ್ಛೇಧ ಆಗಬೇಕು ಎಂದು ಅಲ್ಲಾನು ಆಜ್ಞೆ ಮಾಡುತ್ತಾನೆ. ಆಗ ಪ್ರವಾದಿ ಇಬ್ರಾಹಿಂ ಕತ್ತಿ ತೆಗೆದುಕೊಂಡು ಬಂದು ಇಸ್ಮಾಯಿಲ್ಲನ ಕುತ್ತಿಗೆ ಕೊಯ್ಯಲು ಹೋದಾಗ ಆತನು ಹಿಡಿದ ಕತ್ತಿಗೆ ಇಸ್ಮಾಯಿಲ್ಲನ ಕುತ್ತಿಗೆ ಕೊಯ್ಯುವುದಿಲ್ಲ. ಆಗ ಇಸ್ಮಾಯಿಲ್ಲನು ತಂದೆಗೆ ಹೇಳುತ್ತಾನೆ, 'ನಿನಗೆ ಪುತ್ರ ವಾತ್ಸಲ್ಯಕ್ಕಾಗಿ ನನ್ನ ಕುತ್ತಿಗೆ ಕಡೆಯಲಿಕ್ಕೆ ಆಗುತ್ತಿಲ್ಲ. ಹಾಗಾಗಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನನ್ನ ಕುತ್ತಿಗೆ ಕೊಯ್ಯಿ' ಎಂದು ಹೇಳಿದನು. ಮಗನ ಆಜ್ಞೆ ಪಾಲಿಸಲು ತಂದೆ ಮುಂದಾದಾರು. ಅವಾಗಲೂ ಮಗನ ಕುತ್ತಿಗೆ ಕೊಯ್ಯುವುದಿಲ್ಲವೋ ಅವಾಗ ಅಲ್ಲಾನು ಪ್ರತ್ಯಕ್ಷನಾಗಿ 'ನಿನ್ನ ಮಗನನ್ನು ನೀನು ಎಷ್ಟೇ ಕಡಿದರೂ ಆತನ ಕುತ್ತಿಗೆ ಕೊಯ್ಯುವುದಿಲ್ಲ' ಎಂದು ಆಶೀರ್ವದಿಸಿದನು. ಅಲ್ಲಾನು, 'ನಿನ್ನ ಭಕ್ತಿಯನ್ನು ಪರೀಕ್ಷೆ ಮಾಡಿದೆ. ಈಗ ಈ ಆಜ್ಞೆ ಹಿಂದೆ ತೆಗೆದುಕೊಳ್ಳುತ್ತೇನೆ. ಇದಕ್ಕೆ ಪರ್ಯಾಯವಾಗಿ ನೀನು ಒಂದು ಕುರಿಮರಿಯನ್ನು ಬಲಿ ಕೊಡಬೇಕು' ಎಂದು ಆದೇಶಿಸುತ್ತಾನೆ. ಹಾಗೆ ಕುರಿಮರಿ ಬಲಿ ಕೊಟ್ಟಿದ್ದಕ್ಕಾಗಿ ಬಕ್ರೀದ್ ಹಬ್ಬ ಪ್ರಾರಂಭ ಆಯಿತು.ಬಕ್ಕರ್ ಎಂದರೆ ಆಡು, ಈದ ಎಂದರೆ ಹಬ್ಬ. ಹೀಗಾಗಿ ಆಡನ್ನು ಬಲಿ ಕೊಡುವುದೇ ಬಕ್ರೀದ್ ಹಬ್ಬ ಎಂದು ಕರೆಯಲಾಗುವುದು. 5,000 ವರ್ಷಗಳ ಹಿಂದೆ ಮಕ್ಕಾದಲ್ಲಿ ನಡೆದ ಈ ಒಂದು ಘಟನೆಗೆ ಸಾಕ್ಷಿ ಎಂಬಂತೆ ಪವಿತ್ರ ಬಕ್ರೀದ್ ಹಬ್ಬ ಆಚರಿಸಲು ಮುಸ್ಲಿಮರು ಮೆಕ್ಕಾ ತೆರಳಲು ಅತ್ಯಂತ ಉತ್ಸುಕರಾಗಿರುತ್ತಾರೆ.ಮೆಕ್ಕಾದಲ್ಲಿ ಬಕ್ರೀದ್ ಹಬ್ಬವನ್ನು ವಿಶಿಷ್ಟ, ವಿಶೇಷ ಮತ್ತು ವಿಭಿನ್ನವಾಗಿ ಆಚರಣೆ ಮಾಡುವುದರಿಂದ ಮುಸ್ಲಿಂ ಆಗಿ ಹುಟ್ಟಿದ ಪ್ರತಿಯೊಬ್ಬರೂ ಪವಿತ್ರ ಹಜ್ ಯಾತ್ರೆ ಮೂಲಕ ಮೆಕ್ಕಾಕ್ಕೆ ಜೀವನದಲ್ಲಿ ಒಮ್ಮೆಯಾದರೂ ತೆರಳಬೇಕು ಎನ್ನುವ ಸಂಕಲ್ಪ ಮಾಡಿರುತ್ತಾರೆ. ಮೆಕ್ಕದಲ್ಲಿ ಸಮಾನತೆ : ಇನ್ನೊಂದು ಮುಖ್ಯ ವಿಶೇಷ ಎಂದರೆ ಪ್ರತಿಯೊಬ್ಬರೂ ಒಂದೇ ಮಾದರಿಯ ಬಟ್ಟೆಯನ್ನು ಧರಿಸಿ ನಮಾಜ್‌ಗೆ ಹೋಗುವುದು ಕಡ್ಡಾಯವಾಗಿದೆ. ಅಲ್ಲಾನ ದೃಷ್ಟಿಯಲ್ಲಿ ಶ್ರೀಮಂತರು, ಬಡವರು ಎನ್ನುವ ಭೇದಭಾವ ಇಲ್ಲದೆ ಎಲ್ಲರೂ ಸಮಾನರು ಎನ್ನುವ ಸಂದೇಶ ಸಾರುವ ಸಲುವಾಗಿ ಅಲ್ಲಾನ ಆಜ್ಞೆಯಂತೆ ಮೆಕ್ಕಾಕ್ಕೆ ಬರುವ ಪ್ರತಿಯೊಬ್ಬರು ಒಂದೇ ತರದ ಬಟ್ಟೆಯನ್ನು ಧರಿಸಬೇಕು ಎಂಬ ನಿಯಮವಿದೆ. ಮೆಕ್ಕಾದ ಹಜ್ ನಿಯಮಕ್ಕೆ ಯಾರೂ ಭಂಗ ಬರದಂತೆ ಮುಸ್ಲಿಮರು ನಡೆದುಕೊಳ್ಳುತ್ತಿದ್ದು, ಅಲ್ಲಾನ ವಿಷಯ ಬಂದಾಗ ಎಲ್ಲ ಮುಸ್ಲಿಮರು ಸಮಾನತೆ, ಏಕತೆ ಕಂಡು ಅಲ್ಲಾನ ಕೃಪೆಗೆ ಪಾತ್ರರಾಗುತ್ತಾರೆ.ಆಹಾರ ದಾನ (ಕುರ್ಬಾನಿ): ಬಕ್ರೀದ್ ದಿನದಂದು ಬಲಿ ನೀಡಿದ ಮಾಂಸವನ್ನು ಮೂರು ಸಮಾನ ಭಾಗಗಳಾಗಿ ಹಂಚಲಾಗುತ್ತದೆ. ಒಂದು ಭಾಗ ಬಡವರಿಗೆ ಹಾಗೂ ನಿರ್ಗತಿಕ–ರಿಗೆ, ಇನ್ನೊಂದು ಭಾಗ ಬಂಧು–ಮಿತ್ರರಿಗೆ ಮತ್ತು ಮತ್ತೊಂದು ಭಾಗವನ್ನು ಸ್ವಂತಕ್ಕೆ ಬಳಸಲಾಗುತ್ತದೆ. ಮನೆ ಮನೆಗಳಲ್ಲಿ ಹಬ್ಬದೂಟ:ಮನೆಗಳಲ್ಲಿ ಹಬ್ಬದ ಊಟ, ವಿಶೇಷ ಖಾದ್ಯಗಳನ್ನು ತಯಾರಿಸುವರು. ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಳ್ಳುವರು. ಹಬ್ಬದ ದಿನ ದಾನವಾಗಿ ದೊರೆಯುವ ಮಾಂಸ, ಹಣ, ದಿನಸಿ ಸಾಮಗ್ರಿಗಳಿಂದ ಎಷ್ಟೋ ಬಡಕುಟುಂಬಗಳಿಗೂ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುತ್ತದೆ.



## ನೇಮಕಾತಿ ಪ್ರಕಟಣೆ

ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ನೇಮಕಾತಿ 2026: ವಿವಿಧ ನಿರ್ದೇಶಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯು ಮೇ 2026 ರ ಕರ್ನಾಟಕ ಉನ್ನತ ಶಿಕ್ಷಣ ಇಲಾಖೆಯ ಅಧಿಕೃತ ಅಧಿಸೂಚನೆಯ ಮೂಲಕ ನಿರ್ದೇಶಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಮೇ–2026 ರಂದು ಅಥ–ವಾ ಮೊದಲು ಇ–ಮೇಲ್ ಕಳುಹಿಸಬಹುದು.ಅಧಿಕೃತ ವೆಬ್‌ಸೈಟ್: hed.karnataka.gov.in

## ತೈಲ ದರ ಏರಿಕೆ ಶಾಕ್ ಮೇಲೆ ಶಾಕ್ ಒಂದುಕಡೆ, ಮಸ್ಕಿಯಲ್ಲಿ ಪೆಟ್ರೋಲ್, ಡೀಸೆಲ್ ನೊ ಸ್ಟಾಕ್

◆ ನೈಜ್ಯ ದೆಸೆ ನ್ಯೂಸ್




ಮಸ್ಕಿ: ಇಡಿ ದೇಶದಲ್ಲಿ ತೈಲ ದರ ಏರಿಕೆಯ ಪೆಟ್ಟು ಒಂದುಕಡೆಯಾದರೆ, ವಾಹನ ಸವಾರರು ಬೆಲೆ ಏರಿಕೆ ಮಧ್ಯೆ ಅನಿವಾರ್ಯ ಮತ್ತು ಆಕಸ್ಮಿಕವಾಗಿ ದಿನನಿತ್ಯ ಕೆಲಸ ಕಾರ್ಯಗಳಿಗೆ ಪೆಟ್ರೋಲ್ ಡೀಸೆಲ್ ಅನಿವಾರ್ಯತೆ ಬೇಕೆಬೇಕು,ಇದರ ಬೆನ್ನಲ್ಲೇ ಮಸ್ಕಿ ಪಟ್ಟಣದಲ್ಲಿರುವ ಸೂಪರ್ ಫಿಲಿಂಗ್ ಸ್ಟೇಷನ್ ಬಂಕ್ ನಲ್ಲಿ ಪೆಟ್ರೋಲ್ ಡಿಸೇಲ್ ನೊಸ್ಟಾಕ ದಿಂದ ಮಸ್ಕಿ ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಜನರು ಗಂಭೀರ ಸಮಸ್ಯೆ ಎದುರಿಸಿದರು. ಮುಖ್ಯವಾಗಿ ರೈತರು ಪ್ರಸ್ತುತ ಮುಂಗಾರು ಹಂಗಾಮು ಬಿತ್ತನೆ ಕಾರ್ಯ ಚುರುಕಿನಿಂದ ಕೆಲಸಗಳು ನಡೆದಿದ್ದು,ಇಂತಹ ಸಂದರ್ಭದಲ್ಲಿ ರೈತರು ಕೃಷಿ ಚಟುವಟಿಕೆಗಳ ಕೆಲಸಕ್ಕೆ ಟ್ರಾಕ್ಟರ್ ಬಳಕೆ ಅವಕಾಶ ಹೆಚ್ಚು,ಆದರೆ ಡೀಸೆಲ್, ಪೆಟ್ರೋಲ್ ಮಾತ್ರ ಖಾಲಿ ಖಾಲಿ, ಅದಕ್ಕಾಗಿ ರೈತರು ಬೆಲೆ ಏರಿಕೆ ಒಂದುಕಡೆ,ಇದರ ಮದ್ಯೆ ಸ್ಟಾಕ್ ಇಲ್ಲದ ಕಾರಣ ಬಂಕ್ ಗಳಿಗೆ ಬಂದ ರೈತ ಲಾಲಸಾಬು ಪರಾಪೂರ ತೀವ್ರವಾಗಿ ಆಕ್ರೋಶ ವ್ಯಕ್ತಪಡಿಸಿದರು, ಹಾಗೆ ಪಟ್ಟಣದ ಸೂಪರ್ ಫಿಲ್ಲಿಂಗ್ ಸ್ಟೇಷನ್ ಮಾಲಿಕರಾದ ಪ್ರಕಾಶ ಧಾರಿವಾಲ್ ಶೆಠ್ ರವರು ಮಾತಾಡಿ ಡಿಪೊದಲ್ಲಿ ಸಪ್ಲೈ ಕಡಿಮೆ ಇದೆ,ಕಂಟ್ರಲ್ ಮಾಡಿ ಕೊಡ್ತಾ ಇದ್ದು,ಎಲ್ಲರಿಗೂ ಸಿಗುತ್ತೆ,ಒಂದುದಿನ ಹೆಚ್ಚು ಕಡಿಮೆ ಆಗುತ್ತೆ,ಜನರಿಗೆ ಭಯ ಬೇಡ ಎಂದು ಹೇಳಿದರು.

## ಶಿಕ್ಷಕರ ಸಂಘ ತಾಲೂಕ ಘಟಕದಿಂದ ರಾಜ್ಯದ್ಯಕ್ಷರಿಗೆ ಸನ್ಮಾನ

◆ ನೈಜ್ಯ ದೆಸೆ ನ್ಯೂಸ್




ತಾಳಿಕೋಟಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾದ ಚಂದ್ರಶೇಖರ ನುಗ್ಲಿ ಇವರನ್ನು ಸಂಘದ ತಾಳಿಕೋಟಿ ಘಟಕದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.ಬೆಂಗಳೂರಿನಲ್ಲಿರುವ ಸಂಘದ ರಾಜ್ಯ ಕಾರ್ಯಾಲಯದಲ್ಲಿ ರಾಜ್ಯಾಧ್ಯಕ್ಷರಿಗೆ ಇತ್ತೀಚಿಗೆ ಭೇಟಿ ಮಾಡಿದ ಪದಾಧಿಕಾರಿಗಳು ಅವರನ್ನು ಸಂಘದ ವತಿಯಿಂದ ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿ ಬಿಎಸ್ ಸಾವಳಗಿ ಇವರ ಸಮ್ಮುಖದಲ್ಲಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ತಾಲೂಕ ಘಟಕದ ನೂತನ ಅಧ್ಯಕ್ಷ ಬಿ.ಟಿ.ವಜ್ಜಲ್, ಉಪಾಧ್ಯಕ್ಷ ತಾರಾ ಲಮಾಣಿ, ಪ್ರಧಾನ ಕಾರ್ಯದರ್ಶಿ ಸುರೇಶ ಬೀರಗೊಂಡ, ಕೋಶಾಧ್ಯಕ್ಷ ಆರ್ ಎಸ್ ಹಿಪ್ಪರಗಿ, ಟಿಪಿ–ಎಸ್‌ಟಿ ಅಧ್ಯಕ್ಷ ಸುರೇಶ ವಾಲಿಕಾರ, ಸೊಸೈಟಿ ನಿರ್ದೇಶಕ ಜಿ.ಕೆ.ಪತ್ತಾರ, ಶಿಕ್ಷಕ ಆರ್.ಎಲ್.ಕುಲಕರ್ಣಿ,ಎನ್.ಜಿ.ಒ.ಪ್ರ. ಕಾರ್ಯದರ್ಶಿ ಶಂಕರಗೌಡ ಬಿರಾದಾರ ಮತ್ತಿತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ

◆ ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ: ತಾಲ್ಲೂಕಿನ ಅಸ್ಕಿ ಗ್ರಾಮ ಪಂಚಾಯತಿಯಲ್ಲಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಅನುಸೂಯಾ ಚಲವಾದಿ ಅವರು ಭೇಟಿ ನೀಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೆತ್ತಿಕೊಂಡ ಅಸ್ಕಿ ಗ್ರಾಮದ ಹೊಸ ತೋಟ ಹಳ್ಳ ಹೂಳೆತ್ತುವ ಕಾಮಗಾರಿ ವೀಕ್ಷಿಸಿ ಪರಿಶೀಲಿಸಿದರು.ಇದೇ ಸಂದರ್ಭದಲ್ಲಿ ಕಾಮಗಾರಿ ಸ್ಥಳದಲ್ಲಿ ಸ್ಥಳೀಯ ಪ್ರಾಥ–ಮಿಕ ಆರೋಗ್ಯ ಕೇಂದ್ರದ ನೆರವಿನೊಂದಿಗೆ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಸಣಾ ಶಿಬಿರದಲ್ಲಿ ಸ್ವತಃ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವದರ ಮೂಲಕ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರೂ 'ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಕೂಲಿ ಕೆಲಸ ನಡೆಯುತ್ತಿರುವಲ್ಲಿಯೇ ಉಚಿತ ಆರೋಗ್ಯಶಿಬಿರ ಆಯೋಜಿಸುವುದರಿಂದ ಬಡಕೂಲಿ ಕಾರ್ಮಿಕರು ತಮ್ಮ ದೈನಂದಿನ ಕೆಲಸಗಳನ್ನು ಮಾಡುತ್ತಲೇ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಲು ಇದು ನೆರವಾಗುತ್ತದೆ ದುಡಿಯುವ ಕೈಗಳಿಗೆ ನರೇಗಾ ಬಲ ತಂದುಕೊಡಲಿದ್ದು, ಮನರೇಗಾದಡಿ ಉದ್ಯೋಗ ಚೀಟಿ ಹೊಂದಿದ ಅರ್ಹ ಫಲಾನುಭವಿಗಳು ಯೋಜನೆಯಡಿ ಕೆಲಸ ಮಾಡಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಬೇಕು ಎಂದು ಹೇಳಿದರು.ನರೇಗಾ ಸಹಾಯಕ ನಿರ್ದೇಶಕ ಪಿ.ಎಸ್.ಕಸನಕ್ಕಿ ಮಾತನಾಡಿ,ನರೇಗಾ ಯೋಜನೆಯಡಿ ವಯಸ್ಸಿನ ಮಿತಿ ಇರುವುದಿಲ್ಲ.18 ವರ್ಷ ಮೇಲ್ಪಟ್ಟ ಯುವಕರಿಂದ ಇಳಿ ವಯಸ್ಸಿನ ವಯೋವೃದ್ಧರು ಕೆಲಸ ಮಾಡಲು ಯೋಜನೆಯಡಿ ಅವಕಾಶವಿರುತ್ತದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ನರೇಗಾದಡಿ ಕೆಲಸಕ್ಕೆ ಬರಬೇಕು, ಗಂಡು ಮತ್ತು ಹೆಣ್ಣು 370 ರೂ. ಸಮಾನ ಕೂಲಿ ಪಡೆದುಕೊಳ್ಳಲು ಅವಕಾಶವಿದ್ದು, ಸುಮ್ಮನೆ ಮನೆಯಲ್ಲಿಯೇ ಕುಳಿತು ಕಾಲ ಹರಣ ಮಾಡದೆ ನರೇಗಾದಡಿ ಕೆಲಸ ಮಾಡಿ ಎಂದು ಕಾರ್ಮಿಕರಿಗೆ ಕರೆ ನೀಡಿದರು. ಯೋಜನೆ ನಿಯಮದಂತೆ ಪಾರದರ್ಶಕವಾಗಿ ಕೆಲಸ ಮಾಡಬೇಕು. ಎನ್‌ಎಂಎಂಎಸ್ ತಂತ್ರಾಂಶದಲ್ಲಿ ಫೇಸ್ ಅಥೆಂಟಿಕೇಶನ್ ಕಡ್ಡಾಯವಾಗಿ ಎರಡು ಬಾರಿ ಹಾಜರಾತಿ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಈ ಆರೋಗ್ಯ ಶಿಬರದಲ್ಲಿ ಮದುಮೇಹ , ರಕ್ತದೊತ್ತಡ ತಪಾಸಣೆ ಮಾಡಿ ಸಣ್ಣಪುಟ್ಟ ಕಾಯಿಲೆಗಳಿಗೆ ಔಷದ ವಿತರಣೆ ಮಾಡಲಾಯಿತು. ಕಾಮಗಾರಿಯಲ್ಲಿ ಪಾಲ್ಗೊಂಡಿದ್ದ 93 ಮಹಿಳೆಯರು, 20 ಪುರುಷ ಕೂಲಿಕಾರರು ತಪಾಸಣೆಗೊಳಪಟ್ಟರು. ಸಂದರ್ಭದಲ್ಲಿ ಪಿಡಿಓ ಬಿ.ಎಂ.ಸಾಗರ, ಐಇಸಿ ಸಂಯೋಜಕ ಮಲಕಪ್ಪ, ಸಹಾಯಕ ನಿರ್ದೇಶಕ ಅನ್ನಾನ ಅಹ್ಮದ, ಆರೋಗ್ಯ ಇಲಾಖೆಯ ಕಿರಿಯ ಆರೋಗ್ಯ ನೀರಕ್ಷಣಾ ಅಧಿಕಾರಿ ಭೀಮನೌಡ. ಏವೂರ, ಲ್ಯಾಬ್ ಟೆಕ್ನಿಶಿಯನ್ ಸುಚಿತ್ರ ಪಾಟೀಲ ಕಾಯಕಮಿತ್ರ ಶ್ರೀದೇವಿ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ಉಪಸ್ಥಿತರಿದ್ದರು.

# ಬ್ರಿಲಿಯಂಟ್ ಶಿಕ್ಷಣ ಸಂಸ್ಥೆ ಗ್ರಾಮೀಣ ಮಕ್ಕಳ ಆಶಾಕಿರಣ

◆ ನೈಜ್ಯ ದೆಸೆ ನ್ಯೂಸ್




ತಾಳಿಕೋಟಿ: ನನ್ನ ಮತ ಕ್ಷೇತ್ರದ ಮೈಲೇಶ್ವರ ಎಂಬ ಒಂದು ಸಣ್ಣ ಗ್ರಾಮದಲ್ಲಿ ಒಂದು ಮಾದರಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿ ಗ್ರಾಮೀಣ ಪ್ರತಿಭೆಗಳನ್ನು ರಾಜ್ಯಮಟ್ಟಕ್ಕೆ ಪರಿಚಯಿಸುವ ಕಾರ್ಯ ಮಾಡುತ್ತಿರುವ ಈ ಸಂಸ್ಥೆ ಗ್ರಾಮೀಣ, ಬಡ, ರೈತರ ಮಕ್ಕಳ ಭವಿಷ್ಯದ ಆಶಾಕಿರಣವಾಗಿದೆ ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಹೇಳಿದರು. ತಾಲೂಕಿನ ಮೈಲೇಶ್ವರ ಗ್ರಾಮದ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಬ್ರಿಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಗಂಗಾ ಅಶೋಕ ಕೋಳೂರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಅವರು ತಮ್ಮ ವತಿಯಿಂದ ಶುಕ್ರವಾರ ಆಯೋಜಿಸಿದ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಗಂಗಾ ಕೋಳೂರಗೆ ಸನ್ಮಾನಿಸಿ ಮಾತನಾಡಿದರು. ಈ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾಗುತ್ತಿದ್ದು ಇದೀಗ ಗಂಗಾ ವಿದ್ಯಾರ್ಥಿನಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ನನ್ನ ಕ್ಷೇತ್ರದ ಕೀರ್ತಿಯನ್ನು ಹೆಚ್ಚಿಸಿದ್ದಾಳೆ ಅವಳ ಈ ಸಾಧನೆಯಲ್ಲಿ ಹಗಲಿರುಳು ಶ್ರಮಿಸಿದ ಈ ಸಂಸ್ಥೆಯ ಆಡಳಿತ ಮಂಡಳಿ ಶಿಕ್ಷಕ ವರ್ಗ ಹಾಗೂ ವಿಶೇಷವಾಗಿ ವಿದ್ಯಾರ್ಥಿನಿಯ ಪೋಷಕ–ರಿಗೆ ಅಭಿನಂದನೆಗಳು ಸಲ್ಲಿಸುತ್ತೇನೆ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಎಂಥಹ ಸಾಧನೆಯನ್ನಾದರೂ ಮಾಡಬಹುದು ಎಂಬುದಕ್ಕೆ ಈ ವಿದ್ಯಾರ್ಥಿನಿಯೇ ಉತ್ತಮ ಉಧಾಹರಣೆಯಾಗಿದ್ದಾಳೆ, ಅವಳ ಈ ಸಾಧನೆ ಎಲ್ಲ ವಿದ್ಯಾರ್ಥಿಗಳಿಗೂ ಮಾದರಿಯಾಗಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಒಳ್ಳೆಯ ಸಂಸ್ಕಾರಗಳನ್ನು ನೀಡುವ ಕೆಲಸ ಶಿಕ್ಷಣ ಸಂಸ್ಥೆಗಳಿಂದ ಆಗಬೇಕು. ಮುಂದಿನ ದಿನಗಳಲ್ಲಿ ಈ ಸಂಸ್ಥೆಗೆ ನಾನು ಎಲ್ಲ ರೀತಿಯ ಸಹಕಾರವನ್ನು ನೀಡುತ್ತೇನೆ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಮುಖಂಡ ಮಡುಸೌಕಾರ ಬಿರಾದಾರ ಅವರು ಶಾಸಕ ರಾಜುಗೌಡ ಪಾಟೀಲ ಅವರು ಶಿಕ್ಷಣ ಹಾಗೂ ಕೃಷಿಗೆ ಹೆಚ್ಚು ಒತ್ತು ನೀಡಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ, ವಿದ್ಯಾರ್ಥಿನಿ ಗಂಗಾ ಕೋಳೂರ ಅವರ ಈ ಸಾಧನೆ ಶಾಸಕರಿಗೆ ಇನ್ನಷ್ಟು ಹುಮ್ಮಸ್ಸು ತಂದು ಕೊಟ್ಟಿದೆ. ಸಾಧನೆ ಎಂಬುದು ಯಾರ ಸ್ವತ್ತು ಅಲ್ಲ ಅದು ಯಾರು ಪರಿಶ್ರಮ ವಹಿಸುತ್ತಾರೋ ಅವರಿಗೆ ವಲಿಯುತ್ತದೆ. ವಿದ್ಯಾರ್ಥಿಗಳು ಯಾವುದೇ ವ್ಯಸನಗಳಿಗೆ ಬಲಿ ಯಾಗದೇ ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು. ಮಾರುತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಬಿ. ಮಡಿವಾಳರ ಮಾತನಾಡಿ ಶಾಸಕ ರಾಜುಗೌಡರು ನಮ್ಮ ಸಂಸ್ಥೆಗೆ ಆಗಮಿಸಿ ವಿದ್ಯಾರ್ಥಿನಿ ಕೋಳೂರ ಅವ–ರಿಗೆ ಗೌರವಿಸಿರುವುದು ಅವರಿಗೆ ಶಿಕ್ಷಣದ ಕುರಿತು ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಅವರೊಬ್ಬ ಹೃದಯ ಶ್ರೀಮಂತಿಕೆಯನ್ನು ಹೊಂದಿದ ಸರಳ ಸಜ್ಜನ ರಾಜಕಾರಣಿ ಸದಾ ಜನಸಾಮಾನ್ಯರೊಂದಿಗೆ ಇರುವ ವ್ಯಕ್ತಿ ಅವರ ಮಾರ್ಗದರ್ಶನ ನಮಗೆ ಅಗತ್ಯವಾಗಿದೆ ಅವರ ಈ ಕಾರ್ಯ ನಮಗೆಲ್ಲರಿಗೂ ಸ್ಪೂರ್ತಿ ತಂದು ಕೊಟ್ಟಿದೆ ಎಂದರು. ಇದೇ ಸಂದರ್ಭದಲ್ಲಿ ಶಾಸಕ ರಾಜುಗೌಡ ಪಾಟೀಲ ಇವರಿಗೆ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಬಿ.ನಡುವಿನಮನಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆ ಉಪಾಧ್ಯಕ್ಷ ಆರ್ ಬಿ ನಡುವಿನಮನಿ, ತಾಪಂ ಮ್ಮಾಜಿ ಅಧ್ಯಕ್ಷ ರಾಜುಗೌಡ ಕೋಳೂರ, ವೀರೇಶಗೌಡ ಪಾಟೀಲ, ಉಮೇಶ ಮೈಲೇಶ್ವರ, ಅಪ್ಪು ಕುಳಗೇರಿ, ಪಿಡಿಓ ಪ್ರಭು ಚೆನ್ನೂರ, ಸಂಸ್ಥೆಯ ನಿರ್ದೇಶಕರಾದ ಎಸ್.ಎಚ್.ಪಾಟೀಲ, ಲೀಲಾದೇವಿ ಎಂ.ಬಿರಾದಾರ, ನಿರ್ಮಲಾ.ಎಸ್. ಗಡಗಿ, ಡಾ.ಶಶಿಧರ ಬಿರಾದಾರ, ಕನ್ನಡ ಮಾಧ್ಯಮ ಮುಖ್ಯೋಪಾಧ್ಯಾಯ ಡಾ.ವಿನಾಯಕ ಪಟಗಾರ, ಆಂಗ್ಲ ಮಾಧ್ಯಮ ಮುಖ್ಯೋ ಪಾಧ್ಯಾಯ ಬಿ.ಜಿ.ಕರಕಳ್ಳಿ, ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಶಿಕ್ಷಕ ಸಿದ್ದು ಕರಡಿ ನಿರೂಪಿಸಿದರು.



# ಗೋವಾದಲ್ಲಿ ಕನ್ನಡಿಗ ಮಂಜೂರು ಹುಸೇನ್ ತಿಪ್ಪನಹಟ್ಟಿಗೆ "ಬುದ್ಧ ಶಾಂತಿ ಪ್ರಶಸ್ತಿ ಪ್ರಧಾನ

◆ ನೈಜ್ಯ ದೆಸೆ ನ್ಯೂಸ್



ಗೋವಾ :ರಾಯಚೂರು ಜಿಲ್ಲೆಯ ತಿಪ್ಪನಹಟ್ಟಿ ಗ್ರಾಮದ ಯುವ ಕಾಂಗ್ರೆಸ್ ಮುಖಂಡರು ಹಾಗೂ ಸಮಾಜ ಸೇವಕರಾದ ಮಂಜೂರು ಹುಸೇನ್ ತಿಪ್ಪನಹಟ್ಟಿ ಅವರಿಗೆ ಗೋವಾದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ "ಬುದ್ಧ ಶಾಂತಿ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಗೋವಾದ ಪ್ರಸಿದ್ಧ ಹೋಟೆಲ್ ಅಶೋಕ ಪ್ಲಾಜದಲ್ಲಿ ಕದಂಬ ಫೌಂಡೇಶನ್ ಹಾಗೂ ಸುವರ್ಣ ಫೋಕಸ್ ಕನ್ನಡ ದಿನಪತ್ರಿಕೆಯ ವಾರ್ಷಿಕೋತ್ಸವ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಮಾಜಮುಖಿ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಮಾಜ ಸೇವೆ, ಯುವಜನರ ಸಂಘಟನೆ, ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ನೆರವು, ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿ ಕ್ಷೇತ್ರದಲ್ಲಿ ಸಲ್ಲಿಸಿರುವ ವಿಶೇಷ ಕೊಡುಗೆಯನ್ನು ಪರಿಗಣಿಸಿ ಮಂಜೂರು ಹುಸೇನ್ ಅವರಿಗೆ "ಬುದ್ಧ ಶಾಂತಿ ಪ್ರಶಸ್ತಿ" ನೀಡಿ ಸನ್ಮಾನಿಸಲಾಯಿತು.ಮಂಜೂರು ಹುಸೇನ್ ಅವರು ಹಲವು ವರ್ಷಗಳಿಂದ ಯುವ ಕಾಂಗ್ರೆಸ್ ಸಂಘಟನೆಯಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದು, ಯುವಜನರಲ್ಲಿ ಸಾಮಾಜಿ–ಕ ಕಳಕಳಿ ಮೂಡಿಸುವ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯ, ಸಮಾಜದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದು, ಸಾರ್ವಜನಿಕರಿಗೆ ಅಗತ್ಯ ಸಂದರ್ಭಗಳಲ್ಲಿ ನೆರವು ನೀಡುವುದು ಸೇ–ರಿದಂತೆ ಅನೇಕ ಜನಪರ ಕಾರ್ಯಗಳ ಮೂಲಕ ಜನಮನ ಗೆದ್ದಿದ್ದಾರೆ. ಅವರ ಸರಳತೆ, ಸಮಾಜಮುಖಿ ಚಿಂತನೆ ಹಾಗೂ ಜನರೊಂದಿಗೆ ಹೊಂದಿರುವ ಆತ್ಮೀಯತೆ ಅವರನ್ನು ಯುವಕರಲ್ಲಿ ಮಾದರಿ ನಾಯಕನನ್ನಾಗಿ ಮಾಡಿದೆ ಎಂದು ಕಾರ್ಯಕ್ರಮದ ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.ಕಾರ್ಯಕ್ರಮದಲ್ಲಿ ಸಮಗ್ರ ಶಿಕ್ಷಣ ಇಲಾಖೆ ನಿರ್ದೇಶಕರಾದ ಸತೀಶ್ ಹೊಸಮನಿ, ಚಲನಚಿತ್ರ ನಟ ಸಂಜಯ್ ಗೌಡ, ಗೋವಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸಿದ್ದಣ್ಣ ಮೇಟಿ, ದೀಪಿಕಾ ಕಟ್ಟಿಮನಿ ಗೋವಾ, ಶೀಲಾ ಡೆಸೋಜ, ಸುವರ್ಣ ಫೋಕಸ್ ದಿನಪತ್ರಿಕೆಯ ಸಂಪಾದಕರಾದ ಆಲಂ ಘನಿ, ಡಾ. ಜನ್ಮಭೂಮಿ ನಾಗರಾಜ್, ಧಾರವಾಡದ ಅಹ್ಮದ್ ಮುಜಾವರ, ಚಿಕ್ಕಬಳ್ಳಾಪುರದ ನರಸಿಂಹ ಗೌಡ, ಉದ್ಯಮಿಗಳಾದ ಖಾದರ್ ಸುಭಾನ್, ಟೈಗರ್ ನಾಗಣ್ಣ, ಮಲ್ಲಿಕಾರ್ಜುನ ಹಿರೇಮಠ, ಮಾರುತಿ ಬಡಿಗೇರ್, ಕೆಪಿಸಿಸಿ ಉಪಾಧ್ಯಕ್ಷರಾದ ಪ್ರತಿಭಾ ರೆಡ್ಡಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.ಈ ವೇಳೆ ಮಾತನಾಡಿದ ಗಣ್ಯರು, "ಸಮಾಜ ಸೇವೆ ಎನ್ನುವುದು ಕೇವಲ ಪದವಿಗಾಗಿ ಮಾಡುವ ಕೆಲಸವಲ್ಲ. ಜನರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ಬದುಕಿನಲ್ಲಿ ಬೆಳಕು ತರಲು ಶ್ರಮಿಸುವವರೇ ನಿಜವಾದ ಸಮಾಜ ಸೇವಕರು. ಮಂಜೂರು ಹುಸೇನ್ ಅವರು ಯುವಕರಿಗೆ ಪ್ರೇರಣೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ದೊಡ್ಡ ಮಟ್ಟದಲ್ಲಿ ಸಮಾಜ ಸೇವೆ ಮಾಡಲಿ" ಎಂದು ಹಾರೈಸಿದರು.ಪ್ರಶಸ್ತಿ ಸ್ವೀಕರಿಸಿದ ಮಂಜೂರು ಹುಸೇನ್ ಅವರು ಮಾತನಾಡಿ, "ಈ ಗೌರವ ನನ್ನೊಬ್ಬರದ್ದಲ್ಲ, ನನ್ನನ್ನು ಪ್ರೋತ್ಸಾಹಿಸಿದ ನನ್ನ ಸಿಂಧನೂರು ತಾಲೂಕಿನ ಸ್ನೇಹಿತರು, ಹಿರಿಯರು ಹಾಗೂ ಸಮಾಜದ ಪ್ರತಿಯೊಬ್ಬರದ್ದಾಗಿದೆ. ಜನರ ಸೇವೆ ಮಾಡುವುದೇ ನನ್ನ ಮುಖ್ಯ ಗುರಿ. ಮುಂದೆಯೂ ಸಮಾಜದ ಪರವಾಗಿ ಕೆಲಸ ಮಾಡುತ್ತೇನೆ" ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಕನ್ನಡಾಭಿಮಾನಿಗಳು, ಸಮಾಜ ಸೇವಕರು, ವಿವಿಧ ಸಂಘಟನೆಗಳ ಮುಖಂಡರು, ಯುವಕರು ಹಾಗೂ ಗಣ್ಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.ಮಂಜೂರು ಹುಸೇನ್ ಅವರಿಗೆ ಪ್ರಶಸ್ತಿ ಲಭಿಸಿರುವುದು ಸಿಂಧನೂರು, ತಿಪ್ಪನಹಟ್ಟಿ ಗ್ರಾಮ ಹಾಗೂ ರಾಯಚೂರು ಜಿಲ್ಲೆಯ ಜನರಿಗೆ ಹೆಮ್ಮೆಯ ವಿಷಯವಾಗಿದೆ.

# ಅಧಿಕಾರಕ್ಕಿಂತಲೂ ಕ್ಷೇತ್ರದ ಜನರ ಪ್ರೀತಿ ಮುಖ್ಯ : ಶಾಸಕ ರಾಜುಗೌಡ

◆ ನೈಜ್ಯ ದೆಸೆ ನ್ಯೂಸ್




ತಾಳಿಕೋಟಿ: ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೂ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಸುಸಜ್ಜಿತರಸ್ತೆ, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯದ ವ್ಯವಸ್ಥೆಯನ್ನು ಮಾಡಲು ಆದ–್ಯತೆ ಮೇರೆಗೆ ಕೆಲಸ ಮಾಡುತ್ತಿದ್ದೇನೆ ಇದಕ್ಕೆ ಕ್ಷೇತ್ರದ ಜನರ ಸಹಕಾರ ಇರಲಿ ಎಂದು ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಹೇಳಿದರು. ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ರೂ.52 ಲಕ್ಷ ಮೊತ್ತದ ಜೆಜೆ ಎಂ ಕಾಮಗಾ–ರಿ,ಗೊಟಖಂಡಕಿ ಗ್ರಾಮದಲ್ಲಿ ರೂ. 50 ಲಕ್ಷ ಮೊತ್ತದ ಸಿಸಿ ರಸ್ತೆ ಹಾಗೂ 5 ಲಕ್ಷ ಮೊತ್ತದ ಹಣಮಮ್ಮ ದೇವಸ್ಥಾನ ಹತ್ತಿರ ಸಮುದಾಯ ಭವನ,ಶಳ್ಳಗಿ ಗ್ರಾಮದಲ್ಲಿ ರೂ.20 ಲಕ್ಷ ಮೊತ್ತದ ಡಾ. ಅಂಬೇಡ್ಕರ ಸಮುದಾಯ ಭವನ,ಮೈಲೇಶ್ವರ ಗ್ರಾಮದಲ್ಲಿ ರೂ.50 ಲಕ್ಷ ಮೊತ್ತದ ಸಿಸಿ ರಸ್ತೆ ಹಾಗೂ ರೂ. 18 ಲಕ್ಷ ಮೊತ್ತದ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮೈಲೇಶ್ವರ ಗ್ರಾಮದಲ್ಲಿ ಗ್ರಾಮಸ್ಥರು ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಆಡಳಿತದಲ್ಲಿ ಇಲ್ಲ ನಾನು ವಿರೋಧ ಪಕ್ಷದ ಶಾಸಕ, ಅನುದಾನಕ್ಕೆ ತೀವ್ರ ತೊಂದರೆ ಇದೆ ಆದರೂ ಸಹ ಶಕ್ತಿ ಮೀರಿ ಪ್ರಯತ್ನಿಸಿ ಅನುದಾನವನ್ನು ತಂದು ಕೆಲಸ ಮಾಡುತ್ತಿದ್ದೇನೆ. ನನ್ನ ಕ್ಷೇತ್ರದ ಸಮಗ್ರ ಅಭಿವೃದ್ಧಿ ನನ್ನ ಉದ್ದೇಶವಾಗಿದೆ ಇದು ಸಾಧ್ಯವಾಗಬೇಕಾದರೆ ಗ್ರಾಮಗಳ ಅಭಿವೃದ್ಧಿ ಆಗಬೇಕು ಈ ನಿಟ್ಟಿನಲ್ಲಿ ನಾನು ಹೆಚ್ಚು ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರವು ಕೂಡ ಕಾರಣವಾಗಿದೆ ಮುಂದಿನ ದಿನಗಳಲ್ಲಿಯೂ ಇದೇ ರೀತಿಯಾದ ಸಹಕಾರ ಮತ್ತು ವಿಶ್ವಾಸ ನನ್ನ ಜೊತೆ ಇರಲಿ ಎಂದರು. ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸೌಕಾರ ಬಿರಾದಾರ,ಮುಖಂಡರಾದ ಎಂ.ಎಂ.ಪೋಲಿಸ್ ಪಾಟೀಲ, ವಿಶ್ವನಾಥ ರೆಡ್ಡಿ ನಾಡಗೌಡ, ಪಂಚಾಕ್ಷರಿ ಹಿರೇಮಠ, ಪ್ರಭುಗೌಡ ನಾಡಗೌಡ, ರಾಜುಗೌಡ ಕೋಳೂರ, ಶಂಕರಗೌಡ ದೇಸಾಯಿ,ಕಾಶೀರಾಯ ದೇಸಾಯಿ, ಸಿದ್ದರಾಮಪ್ಪ ಚೌದ್ರಿ ಮೈಲೇಶ್ವರ, ಉಮೇಶ ಬೂದಿಹಾಳ, ಶಿವಲಿಂಗಪ್ಪ ಕುಳಗೇರಿ, ಬಸವರಾಜ ಶಳ್ಳಗಿ,ಬೆಣ್ಣೆಪ್ಪಾ ಕುಳಗೇರಿ, ಸಿದ್ದನಗೌಡ ಬಿರಾದಾರ(ಲಕ್ಕುಂಡಿ), ಅಯ್ಯನಗೌಡ ಪಾಟೀಲ (ಹೊಸಹಳ್ಳಿ), ಸೋಮನಗೌಡ ಯಳವಾರ, ಮಲ್ಲನಗೌಡ ಬಿರಾದಾರ, ವೀರೇಶಗೌಡ ಕಾರಗನೂರ, ರಾಜುಗೌಡ ಯಾಳಗಿ, ಮಲ್ಲನಗೌಡ ಯಾಳಗಿ, ನಿಂಗನಗೌಡ ಅಗ್ನಿ, ರಾಮನಗೌಡ ಕೋಳೂರ, ರಾಮನಗೌಡ ಪಾಟೀಲ,ಎಇಇ ಆರ್.ಎಸ್.ಹಿರೇಗೌಡರ,ಪಿಡಿಒಗಳಾದ ಪ್ರಭು ಚನ್ನೂರ, ಬಸನಗೌಡ ಚೌದ್ರಿ, ಗುತ್ತಿಗೆದಾರ ಅನಿಲ ರಾಥೋಡ ಮತ್ತಿತರರು ಇದ್ದರು.


## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಎಲೆಕ್ಟ್ರಾನಿಕ್ ಮೆಕ್ಯಾನಿಕ್

ಐಟಿಐ ಎಲೆಕ್ಟ್ರಾನಿಕ್ ಮೆಕ್ಯಾನಿಕ್ (Electronics Mechanic) ಕೋರ್ಸ್ 2 ವರ್ಷಗಳ ಅವಧಿಯ ವೃತ್ತಿಪರ ತರಬೇತಿಯಾಗಿದೆ. ಇದು ಎಲೆಕ್ಟ್ರಾನಿಕ್ ಉಪಕರಣಗಳ ಸ್ಥಾಪನೆ, ನಿರ್ವಹಣೆ ಮತ್ತು ರಿಪೇರಿ ಕೌಶಲ್ಯಗಳನ್ನು ಕಲಿಸುತ್ತದೆ. 10ನೇ ತರಗತಿಯ ನಂತರ ಸೇರಬಹುದಾದ ಈ ಕೋರ್ಸ್, ಕೈಗಾರಿಕೆಗಳಲ್ಲಿ ತಾಂತ್ರಿಕ ಉದ್ಯೋಗ ಪಡೆಯಲು ಅತ್ಯುತ್ತಮವಾಗಿದೆ.ಐಟಿಐ ಎಲೆಕ್ಟ್ರಾನಿಕ್ ಕೋರ್ಸ್ ವಿವರಗಳು (Kannada):ಕೋರ್ಸ್ ಹೆಸರು: ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ (Electronics Mechanic) ಅವಧಿ: 2 ವರ್ಷಗಳು (ವಾರ್ಷಿಕ ಪದ್ಧತಿ)ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತದೊಂದಿಗೆ) ಕಲಿಯುವ ವಿಷಯಗಳು: ಎಲೆಕ್ಟ್ರಾನಿಕ್ ಘಟಕಗಳು (components), ಸರ್ಕ್ಯೂಟ್ ಡಯಾಗ್ರಾಮ್‌ಗಳು, ಟಿವಿ, ರೇಡಿಯೋ, ಮೊಬೈಲ್ ರಿಪೇರಿ, ಸಿಸಿಟಿವಿ ಸ್ಥಾಪನೆ ಮತ್ತು ಇತರ ಎಲೆಕ್ಟ್ರಾನಿಕ್ ಉಪಕರಣಗಳ ನಿರ್ವಹಣೆ.ಉದ್ಯೋಗಾವಕಾಶಗಳು: ಎಲೆಕ್ಟ್ರಾನಿಕ್ ಉಪಕರಣಗಳ ತಂತ್ರಜ್ಞ (Technician), ಸರ್ವಿಸ್ ಇಂಜಿನಿಯರ್, ಮೆಕ್ಯಾನಿಕ್, ಮತ್ತು ಸ್ವಯಂ ಉದ್ಯೋಗ (ರಿಪೇರಿ ಅಂಗಡಿ).ಕೋರ್ಸ್ ಮುಖ್ಯಾಂಶಗಳು:ಈ ತರಬೇತಿಯು ಪ್ರಾಯೋಗಿಕ (Practical) ಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುತ್ತದೆ.ಸರ್ಕಾರಿ ಮತ್ತು ಖಾಸಗಿ ಐಟಿಐ ಕಾಲೇಜುಗಳಲ್ಲಿ ಲಭ್ಯವಿದೆ.ಶಿಕ್ಷಣದ ನಂತರ ಓಅಗಿಖ (National Council for Vocational Training) ಪ್ರಮಾಣಪತ್ರ ನೀಡಲಾಗುತ್ತದೆ.

## ಭಲವಾದಿ ಮಹಾಸಭಾ ತಾಲೂಕು ಸಮಿತಿ ಅಧ್ಯಕ್ಷರ ಅಮಾನತು ಏಕ ನಿರ್ಣಯ: ವೀರೇಶ ಹಂಚಿನಾಳ ಕೆ,

ನೈಜ್ಯ ದೆಸೆ ನ್ಯೂಸ್



ಯಾವುದೇ ಸಂಘ ಸಂಸ್ಥೆ ಹಾಗೂ ಸಮಾಜದ ಸಂಘಟನೆಗಳು ತನ್ನದೆಯಾದ ಬೈಲಾವನ್ನು ಒಳಗೊಂಡಿರುತ್ತವೆ. ಬೈಲಾ ಪ್ರಕಾರ ಯಾವುದೇ ಸಮಾಜದ ತಾಲೂಕು ಸಮಿತಿ ರಚನೆ ಹಾಗೂ ಅಧ್ಯಕ್ಷರನ್ನು ಆಯ್ಕೆ ಮಾಡಬೇಕಾದರೆ ಸಮಾಜದ ಮುಖಂಡರೆಲ್ಲ ಸೇರಿ ಒಮ್ಮತದಿಂದ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಬೇಕಾಗುತ್ತದೆ. ಆಯ್ಕೆಯಾದ ಅಧ್ಯಕ್ಷರನ್ನು ಮೂರು ಅಥ-ವಾ ಐದು ವರ್ಷ ಮುಂದುವರೆಸುವುದು ಎಲ್ಲರಿಗೂ ಗೋತ್ತಿರುವ ವಿಷಯ. ಆದರೆ ಸಿಂಧನೂರು ತಾಲೂಕಿನಲ್ಲಿ ರಾಯಚೂರು ಜಿಲ್ಲಾ ಅಧ್ಯಕ್ಷ ಶಿವರಾಜ ಜಾನೇಕಲ್ ಅವರು ತಾಲೂಕಿನಲ್ಲಿ ನಾಲ್ಕು ಜನ ಅಧ್ಯಕ್ಷರನ್ನು ಬದಲಾವಣೆ ಮಾಡಿರುತ್ತಾರೆ. ಇದರಿಂದ ಸಮಾಜದ ಮೇಲೆ ಕೆಟ್ಟ ಸಂದೇಶ ಉಂಟಾಗಿದೆ. ಒಟ್ಟಿನಲ್ಲಿ ಶಿವರಾಜ ಜಾನೇಕಲ್ ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಇವರ ವರ್ತನೆ ಅನ್ಯ ಜಾತೀಯ ಸಮಾಜದವರು ಹಾಡಿಕೊಂಡು ನಗುವಂತಾಗಿದೆ ಎಂದು ಮಾಜಿ ಅಧ್ಯಕ್ಷ ವೀರೇಶ ಹಂಚಿನಾಳ ಕೆ. ಹೇಳಿದರು.ನನ್ನ ಮೇಲೆ ಮಾಡಿದ ಆರೋಪಕ್ಕೆ ದಾಖಲೆ ಸಮೇತ ಸಾಬೀತುಪಡಿಸಬೇಕು. ನನ್ನನು ಅಧ್ಯಕ್ಷ ಸ್ಥಾನದಿಂದ ತೆಗೆಯಬೇಕಾದರೆ ಸಮಾಜದ ಮುಖಂಡರೆಲ್ಲರನ್ನು ಒಳಗೊಂಡ ಸಭೆಯಲ್ಲಿ ನನ್ನ ವಿರುದ್ಧ ಸಮಾಜದ ಮುಖಂಡರು ಅವಿಶ್ವಾವ ನಿರ್ಣಯ ತೆಗೆದು ಕೊಂಡಾಗ ನನ್ನನ್ನು ಅಮಾನತು ಮಾಡಿ ಆದ-ರೆ ಸುಖಾ:ಸುಮ್ಮನೆ ತೆಗೆದು ಹಾಕಿದ್ದು ಏಕ ನಿರ್ಣಯ ಆಗಿದೆ. ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ತಾಲೂಕು ಸಮಿತಿಗೆ ಅಧ್ಯಕ್ಷರನ್ನಾಗಿ 25-11-2025 ರಂದು ಸರ್ವಾನುಮತದಿಂದ ಆಯ್ಕೆ ಮಾಡಿ ಆದೇಶ ಹೊರಡಿಸಿದ್ದೀರಿ, ನೀವು ಸಮಾಜದ ಏಳಿಗೆಗೆ ಶ್ರಮಿಸಲು ಕರೆ ನೀಡಿರುತ್ತೀರಿ, ಅದರಂತೆ ಸಮಾಜದ ಒಳಿತಿಗಾಗಿ ನನ್ನ ಇತಿಮಿತಿಯಲ್ಲಿ ಕೆಲಸ ಮಾಡಿದ್ದೇನೆ ಇತ್ತಿಚೆಗೆ ಬುದ್ದ, ಬಸವ, ಅಂಬೇಡ್ಕರ, ಅವರ ಜಯಂತಿಯ ಅಂಗವಾಗಿ ಸಮಾಜದ ಎಲ್ಲ ಹಿರಿಯರ ಸಮ್ಮುಖದಲ್ಲಿ ಹಾಗೂ ಸಮಿತಿಯ ಪದಾಧಿಕಾರಿಗಳ ಒಳಗೊಂಡು ಸಾಮೂಹಿಕ ವಿವಾಹ ಕಾರ್ಯಕ್ರಮ ಮಾಡಿದ್ದೇನೆ, ನೀವು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಒಳ್ಳೆಯ ಕಾರ್ಯಕ್ರಮ ಇದಾಗಿದೆ ಎಂದು ಸಹಬ್ಬಾಸ್ ಗಿರಿ ನೀಡಿರುತ್ತೀರಿ. ಅದರೆ ದಿಢೀರನೆ ಬದಲಾವಣೆ ಹಿಂದೆ ಇರುವ ಕಾರಣ ಏನೆಂಬುದು ತಿಳಿಯದಾಗಿದೆ.ಸಂಘಟನೆ ಬೈಲಾ ಅಥವಾ ನಿಯಮಗಳು ಗೊತ್ತಿಲ್ಲದೆ ಏಕಾಏಕಿ ತಾಲೂಕು ಅಧ್ಯಕ್ಷರ ಸ್ಥಾನದಿಂದ ನನ್ನನ್ನು ಅಮಾನತು ಮಾಡಿರುತ್ತಾರೆ. ಯಾಕೆ ಅಂತ ವಿಚಾರಣೆ ಮಾಡಿದಾಗ ಸಂಘಟನೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದಿಲ್ಲ ಮತ್ತು ಸಂಘಟನೆ ವಿಚಾರದಲ್ಲಿ ಏಕ ನಿರ್ಣಯ ತೆಗೆದುಕೊಂಡಿದ್ದೀರಿ. ಹಾಗಾಗಿ ನಿಮ್ಮನ್ನು ಸಂಘಟನೆಯಿಂದ ಅಮಾನತು ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷರು ತಿಳಿಸಿರುತ್ತಾರೆ. ಆದರೆ ಒಂದು ಸಂಘಟನೆಯ ಜಿಲ್ಲಾಧ್ಯಕ್ಷರಾದವರು ಯಾವುದೇ ಅಧ್ಯಕ್ಷ ಸಂಘದ ವಿರುದ್ಧವಾಗಿ ನಡೆದು ಕೊಂಡರೆ ಎರಡು ಅಥವಾ ಮೂರು ನೋಟಿಸ್ ಕಳಿಸಬೇಕು.ಆ ನೋಟಿಸ್ ಗೆ ಉತ್ತರಿಸದಿದ್ದಾಗ ವಿರುದ್ಧವಾಗಿ ನಡೆದುಕೊಂಡರೆ ತೆಗೆದು ಹಾಕಲು ಅಧಿಕಾರ ಇರುತ್ತದೆ. ಹಾಗಾಗಿ ಇನ್ನೋಮ್ಮೆ ಸಭೆ ಕರೆದು ಸಮಾಜದ ಮುಖಂಡರು, ಹಿರಿಯರು ಯಾರಿಗೆ ಬಹುಮತ ನೀಡುತ್ತಾರೆಯೋ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರೆಸಿ ನೀವು ಸುಮ್ಮನಾದರೆ ಸಮಾಜದ ಹಿರಿಯರ ಹಾಗೂ ಯುವ ಮುಖಂಡರ ಒತ್ತಾಯದ ಮೇರೆಗೆ ಅಧ್ಯಕ್ಷನಾಗಿ ಮುಂದುವರೆದು ಸಮಾಜದ ಏಳಿಗೆಗೆ ದುಡಿಯುತ್ತೇನೆ. ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಸ್ಥಾನದಿಂದ ನನ್ನನ್ನು ಅಮಾನತು ಮಾಡಿರುವುದು ಸಂಘದ ಬೈಲಾ ವಿರುದ್ಧ ಹಾಗೂ ಏಕಪಕ್ಷೀಯ ನಿರ್ಧಾರವಾಗಿದೆ ಕಾನೂನು ಹೋರಾಟಕ್ಕೆ ನಾನು ಮುಂದಾಗುತ್ತೇನೆ ಎಂದು ಪತ್ರಿಕೆ ಹೇಳಿಕೆ ಮೂಲಕ ತಿಳಿಸಿದ್ದಾರೆ.

# ಶಿಕ್ಷಕರ ಸಂಘ ತಾಲೂಕ ಘಟಕದ ಪದಾಧಿಕಾರಿಗಳ ಅವಿರೋಧ ಆಯ್ಕೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಕರ್ನಾಟಕ ರಾಜ್ಯ ಪ್ರಾಥ-ಮಿಕ ಶಾಲಾ ಶಿಕ್ಷಕರ ಸಂಘ(ರಿ)ಬೆಂಗಳೂರು ತಾಲೂಕ ಘಟಕ ತಾಳಿಕೋಟಿ ಇದರ ಪದಾಧಿಕಾರಿಗಳು (2026 ರಿಂದ 2031ರ ಅವಧಿಯ) ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಎಸ್.ಜಿ. ಜಾಲವಾದಿ ತಿಳಿಸಿದರು. ಶುಕ್ರವಾರ ಪಟ್ಟಣದ ಎಸ್ ಕೆ ನಗರದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಂಘದ ವತಿಯಿಂದ ಹಮ್ಮಿಕೊಂಡ ನೂತನ ಪದಾಧಿಕಾರಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಈ ಘೋಷಣೆ ಮಾಡಿದರು. 2026 ರಿಂದ 2031ರವರೆಗಿನ 5 ವರ್ಷದ ಅವಧಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಳಿಕೋಟಿ ತಾಲೂಕ ಘಟಕದ ಅಧ್ಯಕ್ಷರಾಗಿ ಶಿಕ್ಷಕರಾದ ಭೀಮನಗೌಡ ವಜ್ಜಲ್,ಉಪಾಧ್ಯಕ್ಷರಾಗಿ ತಾರಾ ಲಮಾಣಿ, ಮಹಿಳಾ ಉಪಾಧ್ಯಕ್ಷರಾಗಿ ರೇಣುಕಾ ಬಸಪ್ಪ ಆಲೂರ, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ ಬಾಲಪ್ಪ ಬೀರಗೊಂಡ,



ಕೋಶಾಧ್ಯಕ್ಷರಾಗಿ ರಮೇಶಕುಮಾರ ಹಿಪ್ಪರಗಿ, ಮಹಿಳಾ ಸಹ ಕಾರ್ಯದರ್ಶಿಯಾಗಿ ಸರಸ್ವತಿ ಬನ್ನೆಟ್ಟಿ, ಸಹ ಕಾರ್ಯದರ್ಶಿಗಳಾಗಿ ಅಲ್ತಾಫ್ ನಗಾರ್ಚಿ, ಎನ್ಕೆ ಸಿಪಾಯಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ನೀಲಮ್ಮ ಮೈಲೇಶ್ವರ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಶೈಲ ನಾಯ್ಕೋಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸನ್ಮಾನ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಳಿಕೋಟಿ ತಾಲೂಕ ಘಟಕಕ್ಕೆ ಅವಿರೋಧವಾಗಿ ಆಯ್ಕೆಯಾದ ಪದಾಧಿಕಾ-ರಿಗಳಿಗೆ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಸಂಘದ ಅಧ್ಯಕ್ಷರಾದ ಬಿ.ಟಿ.ವಜ್ಜಲ್,ಉಪಾಧ್ಯಕ್ಷ ತಾರಾ ಲಮಾಣಿ ಹಾಗೂ ಪ್ರಧಾನ ಕಾರ್ಯದರ್ಶಿ ಸುರೇಶ ಬೀರಗೊಂಡ ಅವರು ಮಾತನಾಡಿ ಎಲ್ಲ ಶಿಕ್ಷಕ ಸದಸ್ಯರು ನಮ್ಮೆಲ್ಲರ ಮೇಲೆ ವಿಶ್ವಾಸವಿರಿಸಿ ಅವಿರೋಧವಾಗಿ ಆಯ್ಕೆ ಮಾಡಿ ಸೇವಾ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಅವರ ವಿಶ್ವಾಸಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಂಡು ಅವರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದರು. ಶಿಕ್ಷಕ ಸುರೇಶ ವಾಲಿಕಾರ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಡಿ ಎನ್ ಚಿಕ್ಕಮಠ ಜೆ. ಬಿ.ಕುಲಕರ್ಣಿ, ಕೆ.ಪಿ. ಬಿರಾದಾರ, ಬಾಲಾಜಿ ವಿಜಾಪುರ, ಎನ್. ಬಿ.ಮಂಟಗಿ, ಶಂಕರಗೌಡ ಬಿರಾದಾರ, ಎಸ್ ಎಂ ಬೈಚಬಾಳ, ಜಿ ಆರ್ ಸೋನಾರ, ಸಂಜು ಹಜೇರಿ, ಡಿಜೆ ಬಾಗೆವಾಡಿ, ಆರ್ ಎಲ್ ಕುಲಕರ್ಣಿ,ಎಸ್.ಎಂ.ಬೈಚಬಾಳ, ಹಣಮಂತ ಮಾದರ, ಎಂ.ಜಿ.ಕುನ್ನೂರ, ರಾಮನಗೌಡ ಬಿರಾದಾರ, ಶಿವನಗೌಡ ಅಸ್ಕಿ, ಬಿ.ಸಿ.ಹುಲ್ಲೂರ, ಎಸ್ ಎನ್ ಪಾಟೀಲ, ಕೆ. ಎನ್.ಜಮಾದಾರ, ಎ.ಐ. ಪತ್ತಾರ, ಸಂತೋಷ್ ನಾವಿ,ರಾಜು ಹಿರೇಮಠ, ಶಿಕ್ಷಕೀಯರಾದ ಜಿ.ಟಿ.ಬಿರಾದಾರ, ಎಲ್.ಎ.ಬಿಜಾಪುರ, ಎಸ್ ಹೆಚ್ ಗಾಳಪ್ಪಗೋಳ, ಬಿ.ಬಿ.ಕುಂಟೋಜಿ, ಎಸ್.ಟಿ. ತಮ್ಮಣ್ಣವರ, ಆರ್ ಸಿ ಇಂಗಳೆ, ಎಸ್ ಎಸ್ ಪಾಟೀಲ, ಎಂ ಎಸ್ ಹೊಸಗೌಡ್ರ ಎ.ಜಿ.ಕುಚನೂರ ಮತ್ತಿತರರು ಇದ್ದರು.

# ಯಶಸ್ವಿಯಾಗಿ ಮುಕ್ತಾಯಗೊಂಡ ಬೇಸಿಗೆ ಶಿಬಿರ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ರಾಯಚೂರು ಮೇ.26 (ಕರ್ನಾಟಕ ವಾರ್ತೆ): ಬೆಂಗಳೂರಿನ ರಾಜ್ಯ ಬಾಲ ಭವನ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಬಾಲ ಭವನ ರಾಯಚೂರು ಇವರ ಸಹಯೋಗದಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಕಾರ್ಯಕ್ರಮದ ಸಮಾರೋಪ ಸಮಾರಂಭಯು ರಾಯಚೂರು ತಾಲೂಕಿನ ಕಲವಲದೊಡ್ಡಿಯ ಸರ್ಕಾರಿ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು.ಕಲವಲದೊಡ್ಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಹನುಮಂತು ಕೊಲೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಮುಖ್ಯ ಅಥಿತಿಗಳಾಗಿ ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ



ಮೌನೇಶ್, ಗ್ರಾಮ ಪಂಚಾಯತಿ ಸದಸ್ಯ ಅಂಜಿನಯ್ಯ ಕಲವಲದೊಡ್ಡಿ, ಮಂಗಳ ನಾಯಕ ಗಂಡ ಸುರೇಶ್, ಗಿರಿಧರ ರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಡರ್ ತಜ್ಞರಾದ ಗಿರಿಜವ್ವ ಅಕ್ಕಿ, ಜಿಲ್ಲಾ ಬಾಲ ಭವನ ಕಾರ್ಯಕ್ರಮದ ಸಂಯೋಜಕಿ ದೀಪಾ, ಬಾಲ ಭವನ ಕಚೇರಿ ಸಹಾಯಕಿ ತಾರಮ್ಮ, ಪೋಷಣ್ ಅಭಿಯಾನದ ಸಹಾಯಕ ಅಮರೇಶ್, ಶಿಕ್ಷಣ ಪ್ರೇಮಿ ಬದ್ರಿ ಜಗನ್ನಾಥ ಕಲವಲದೊಡ್ಡಿ, ಸಂಪನ್ಮೂಲ ವ್ಯಕ್ತಿಗಳಾದ ಮಹಾದೇವಪ್ಪ, ಶಶಿಧರ, ಬುಡ್ಡಣ್ಣ, ಬಾಬು, ಇಂದಿರಮ್ಮ, ಅಂಗನವಾಡಿ ಕಾರ್ಯಕರ್ತೆಯರಾದ ಅಂಬಮ್ಮ, ಶಂಕರಮ್ಮ ಅವರು ಉಪಸ್ಥಿತರಿದ್ದರು.ನಂತರ ಗಿರಿ-ಜವ್ವ ಅಕ್ಕಿ ಇವರು ಬೇಸಿಗೆ ಶಿಬಿರದ ಕುರಿತು ಮಕ್ಕಳ ಪಠ್ಯೇತರ ಚಟುವಟಿಕೆಗಳ ಬಗ್ಗೆ ಆಸಕ್ತಿ ತೋರಿಸಬೇಕೆಂದು ತಿಳಿಸಿದರು. ಕಾರ್ಯಕ್ರಮ ಮಕ್ಕಳಿಗೆ ಸಂತಸ ತಂದಿದೆ ಎಂದು ಹೇಳಿದರು.ಬೇಸಿಗೆ ಶಿಬಿರಕ್ಕೆ ಆಗಮಿಸಿದ ಪಾಲಕರು ತಮ್ಮ ಮಕ್ಕಳು ಬೇಸಿಗೆ ಶಿಬಿರದಲ್ಲಿ ಮಾಡಿದಂತಹಕರ ಕುಶಲೆ, ಮೆಹಂದಿ, ಚಿತ್ರಕಲೆ, ಸಾಮೂಹಿಕ ನೃತ್ಯ ಮತ್ತು ಯೋಗವನ್ನು ವೀಕ್ಷಿಸಿ ಸಂತಸಪಟ್ಟರು.ಕಾರ್ಯಕ್ರಮದ ನಿರೂಪಣೆಯನ್ನು ಕಾರ್ಯಕ್ರಮ ಸಂಯೋಜಕಿ ದೀಪಾ ಅವರು ಮಾಡಿದರು.

# ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಕ್ರಮಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಮುಂಗಾರು ಮಳೆ ಪ್ರಾರಂಭವಾಗಿದ್ದು ರೈತರಿಗೆ ಅಗತ್ಯದ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಸರ್ಕಾರ ನಿಗದಿಗೊಳಿಸಿದ ದರದಲ್ಲಿ ಒದಗಿಸುವಂತೆ ಹಾಗೂ ನಿಗದಿದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಜಯಕರ್ನಾಟಕ ಜನಪರವೇದಿಕೆಯು ಮುಖ್ಯಮಂತ್ರಿಗಳಿಗೆ ಬರೆದ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಶುಕ್ರವಾರ ಸಲ್ಲಿಸಿದರು.ಮನವಿಪತ್ರದಲ್ಲಿ ಬಿತ್ತನೆಗಾಗಿ ಬೀಜ ಹಾಗೂ ರಸಗೊಬ್ಬರವನ್ನು ಖರೀದಿಸಲು ರೈತ ಸಂಪರ್ಕ ಕೇಂದ್ರಗಳಿಗೆ ಹಾಗೂ ಖಾಸಗಿ ಮಾರಾಟ ಮಳಿಗೆಗಳಿಗೆ ತೆರಳುತ್ತಿದ್ದಾರೆ. ಆದರೆ ಅನೇಕ ಕಡೆಗಳಲ್ಲಿ ರೈತರಿಗೆ ರಸಗೊಬ್ಬರ ಲಭ್ಯವಿಲ್ಲ ಎಂದು ತಿಳಿಸಿ, ಸರ್ಕಾರ ನಿಗದಿಪಡಿಸಿದ ಅಧಿಕೃತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡು ಬರುತ್ತಿದೆ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವುದು ಕಂಡು ಬರುತ್ತದೆ. ಇದರಿಂದ ಬಡ ಮತ್ತು ಮಧ್ಯಮ ವರ್ಗದ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದು ಕೃಷಿ ಚಟುವಟಿಗಳ ಮೇಲೆಯು ದುಷ್ಪ-ರಿಣಾಮ ಬೀರುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ತುರ್ತು ಕ್ರಮ ಕೈಕೊಂಡು ರೈತ-ರಿಗೆ ನ್ಯಾಯ ಒದಗಿಸಬೇಕೆಂದು ಹಾಗೂ ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳ ಮುಂದೆ ಕಡ್ಡಾಯವಾಗಿ ಬೀಜ ಹಾಗೂ ರಸಗೊಬ್ಬರಗಳ ದರಪಟ್ಟಿ ಮತ್ತು ಲಭ್ಯವಿರುವ ಸ್ಟಾಕ್ ವಿವರವನ್ನು ಸಾರ್ವಜನಿಕವಾಗಿ ಪ್ರದರ್ಶಿಸುವಂತೆ ಕ್ರಮ ಕೈಗೊಳ್ಳಬೇಕು. ಹಾಗೆಯೇ ಹತ್ತಿ ಬೀಜ ಸೇರಿದಂತೆ ಇತರೆ ಎಲ್ಲಾ ಬೀಜಗಳ ಅಧಿಕೃತ ದರಪಟ್ಟಿಯನ್ನು




ಪ್ರದರ್ಶಿಸಿ, ಸರ್ಕಾರ ನಿಗದಿಪಡಿಸಿದ ಬೆಲೆಯಲ್ಲಿಯೇ ಮಾರಾಟವಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಜಯಕರ್ನಾಟಕ ಜನಪರವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷಬಸವರಾಜ ಸಿಂಗನಳ್ಳಿ, ಜಿಲ್ಲಾ ಕಾರ್ಯಾಧ್ಯಕ್ಷ ಬಾಪುಗೌಡ ಎಸ್.ಪಾಟೀಲ ಮೊದಲಾದವರು ವಿನಂತಿಸಿದರು.

# ಸರಿಯಾದ ಚಿಕಿತ್ಸೆಯಿಂದ ಸಂಪೂರ್ಣ ಗುಣ ಹೊಂದುವ ಕ್ಷಯರೋಗಕ್ಕೆ ಭಯ ಬೇಡ, ಉಚಿತ ಚಿಕಿತ್ಸೆ ಲಭ್ಯವಿದೆ:

ನೈಜ್ಯ ದೆಸೆ ನ್ಯೂಸ್

ರಾಯಚೂರು : ಮೇ,26, ಸಾವಿರಾರು ವರ್ಷಗಳಿಂದ ಸಮುದಾಯದಲ್ಲಿ ಬೇರುರಿರುವ ಕ್ಷಯರೋಗ (ಟಿಬಿ) ಯನ್ನು ಕೊನೆಗಾಣಿಸಲು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿದ್ದು, ರೋಗ ಖಚಿತ ಪಟ್ಟಲ್ಲಿ ಸಾರ್ವಜನಿಕರು ಮುಜುಗುರ ಪಡದೆ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತಮ್ಮ ಮನೆಯಲ್ಲಿಯೇ ಪ್ರತಿದಿನ ಮಾತ್ರೆ ಸೇವಿಸುವ ಮೂಲಕ ಕ್ಷಯರೋಗದಿಂದ ಮುಕ್ತರಾಗಲು ಸಿಯಾತಲಾಬ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಗುಂಡಮ್ಮ ತಿಳಿಸಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಘಟಕದೊಂದಿಗೆ ನಗರದ ಅಸ್ಕಿಹಾಳದ ವಾಲ್ಮೀಕಿ ಭವನದಲ್ಲಿ ಹ್ಯಾಂಡ್‌ಹೇಲ್ಡ್ ಎಕ್ಸ್-ರೇ ಯಂತ್ರದ ಮೂಲಕ ಕ್ಷಯರೋಗ ಪತ್ತೆ ಹಚ್ಚುವ ಕಾರ್ಯದಲ್ಲಿ ಮಾತನಾಡುತ್ತಾ, ಎಲ್ಲರಿಗೂ ಗೊತ್ತಿರುವಂತೆ ಮೈಕೋ ಬ್ಯಾಕ್ಟೀ-ರಿಯಂ ಟ್ಯೂಬರ್‌ಕ್ಯುಲೋಸಿಸ್ ಎಂಬ ರೋಗಾಣುನಿಂದ ಹರಡುವ ಈ ಕಾಯಿಲೆ ಎರಡು ವಾರಗಳಿಗಿಂತ ಹೆಚ್ಚು ದಿನದ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು,




ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಹಸಿವಾಗದಿರುವುದು, ತೂಕ ಇಳಿಕೆ, ಯಂತಹ ಪ್ರಮುಖ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣವೇ ಒಮ್ಮೆ ಪರೀಕ್ಷೆ ಮಾಡಿಸಿಕೊಳ್ಳಲು ಕೋರಿದರು.ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ ಮಾತನಾಡಿ ಕ್ಷಯವೆಂದು ಖಚಿತಪಟ್ಟಲ್ಲಿ ಹತ್ತಿರದ ಸರಕಾರಿ ಆರೋಗ್ಯ ಕೇಂದ್ರದಲ್ಲಿ ವೈದ್ಯರ ನಿರ್ದೇಶನದಂತೆ 6 ತಿಂಗಳು ಉಚಿತ ಚಿಕಿತ್ಸೆ ಪಡೆದು ಗುಣಮುಖರಾಗಲು ಅವಕಾಶವಿದೆ ಎಂಬುದನ್ನು ಇತರರಿಗೂ ತಿಳಿಸಲು ಹಾಗೂ ದಾನಿಗಳು ಮುಂದೆ ಬಂದು ಆರ್ಥಿಕವಾಗಿ ದುರ್ಬಲವಿರುವ ರೋಗಿಗಳಿಗೆ ಹಾಗೂ ಸಕ್ಕರೆ ಕಾಯಿಲೆ, ರಕ್ತದೊತ್ತಡ ಸೇರಿದಂತೆ ಇತರೆ ಕಾಯಿಲೆಯಿಂದ ಬಳಲುವವರು ಶೀಘ್ರ ಗುಣಮುಖರಾಗಲು ಪ್ರಧಾನಮಂತ್ರಿ ನೀಕ್ಷಯಮಿತ್ರ ಅಭಿಯದನದಡಿಯಲ್ಲಿ ರೋಗಿಗಳನ್ನು ಆರು ತಿಂಗಳು ಕಾಲ ದತ್ತು ತೆಗೆದುಕೊಂಡು ವಿವಿಧ ದವಸ-ಧಾನ್ಯ ಒಳಗೊಂಡ ಪೌಷ್ಟಿಕಾಹಾರ ಕೀಟ್ ಒದಗಿಸಬಹುದಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭ 40 ಹೆಚ್ಚು ಜನರಿಗೆ ಕ್ಷಯರೋಗ ತಪಾಸಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಸ್ಮೂದ್ದೀನ್, ಎಸ್.ಟಿ.ಎಸ್ ಅಮೀರ್, ಟಿ.ಬಿ.ಹೆಚ್.ವಿ. ಯುಸೂಫುದ್ದೀನ್, ಪ್ರದೀಪ್, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ರೇಣುಕಾ, ಹೆಚ್.ಐ.ಓ, ನಿಶಾಂತ್, ಆಶಾ ಕಾರ್ಯಕರ್ತೆಯರಾದ ಸುಜಾತ, ಗಂಗಮ್ಮ, ಮಂಜುಳಾ ಸೇರಿದಂತೆ ತಾಯಂದಿರು, ಸಾರ್ವಜನಿಕರು ಹಾಜರಿದ್ದರು.